# ಜನಪದ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಮಾರ್ಚ್ - ೨೦೧೫ ಸಂಚಿಕೆ - ೦೮

## ಬಂದಿದೆ ಚಳುವಳಿಗೆ ಕಾಲ!

*

## ನೆಲದ ಭಾಷೆ ಮತ್ತು ಕಲಿಕೆ ಮಾಧ್ಯಮ

*

## ಚರ್ಚೆಯಿಲ್ಲದ ಕಾನೂನು ಸಂಗತವೇ?

*

## ಮುಸ್ಲಿಂಮರು ಮತ್ತು ಆದರ್ಶ ನಡೆ

# ಜನಪದ ವಿಚಾರದಲ್ಲಿ

ಮಾರ್ಚ್–೨೦೧೫

## ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೫
ಸಂಪುಟ - ೧೫
ಸಂಚಿಕೆ - ೦೮

ಸಂಪಾದಕ
ಸುರೇಂದ್ರ ಕೌಲಗಿ

**ಸಲಹಾ ಸಮಿತಿ**
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

**ಚಂದಾ ವಿವರ**
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-



**ಸಂಪರ್ಕ ವಿಳಾಸ**
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854

email :
janapada@yahoo.com
Web: janapada.net


# ನಾಳೆಗಳು ಭೀಕರ

ದೇಶದ ಸಮಗ್ರ ಚಿತ್ರಣವನ್ನೆ
ಬದಲಾಯಿಸಿ ಬದಲಾವಣೆಯನ್ನು
ತರುತ್ತೇವೆನ್ನುತ್ತಾರೆ ಆಳುವವರು
ಆದರೆ, ನಾಳೆಗಳು ಭೀಕರವಾಗಿವೆ
ಎಂಬ ಸತ್ಯ ಮರೆಮಾಚಿ

ನದಿಗಳನ್ನೆ ಜೋಡಿಸುತ್ತೇವೆ
ಜಲಶಕ್ತಿಯ ಉತ್ಪಾದಿಸುತ್ತೇವೆಂದು
ಗಂಗೆಯ ನಿರ್ಮಲಗೊಳಿಸುತ್ತೇವೆಂದು
ಹೇಳುತ್ತಾರೆ.
ಆದರೆ, ನಾಳೆಗಳು ಭೀಕರವಾಗಿವೆ
ಎಂಬ ಅರಿವಿಲ್ಲದೆ.

ದೇಶದ ಗ್ರಾಮಗಳು ದತ್ತುಪಡೆದು
ದೇಶೋದ್ಧಾರ ಮಾಡುತ್ತೇವೆ
ನವ ಭಾರತ ನಿರ್ಮಿಸುತ್ತೇವೆ
ಬೃಹತ್ ಯೋಜನೆ ರೂಪಿಸುತ್ತೇವೆನ್ನುತ್ತಾರೆ
ಆದರೆ, ನಾಳೆಗಳು ಭೀಕರವಾಗಿವೆ
ಎಂಬ ಆಲೋಚನೆ ಮಾಡದೆ.

ಕೆಂಪುಕೋಟೆಯ ಮುಂದೆ ನಿಂತು
ಕೇಸರಿ ರುಮಾಲು ಸುತ್ತಿ
ಅಭೇದ್ಯ ಭದ್ರಕೋಟೆಯನ್ನು ಕಟ್ಟಿಸಿ
ಗುಂಡು ನಿರೋಧಕ ಕವಚವ ಸರಿಸಿ
ಡಿಜಿಟಲ್ ಇಂಡಿಯಾ ಎನ್ನುತ್ತಾರೆ.
ಆದರೆ, ನಾಳೆಗಳು ಭೀಕರವಾಗಿವೆ
ಎಂಬ ಸತ್ಯವ ಮರೆಮಾಚಲಾಗದು!

– **ಎಸ್.ನಿಂಗರಾಜ್, ಹೂವಿನಹಡಗಲಿ**
(ಸಾಭಾರ ಹೊಸತು)

# ಚಿಂತನೆಗೊಂದು ಸಂಗತಿ

ರಾಜ್ಯದಲ್ಲಿ ಪುನಃ ಲಾಟರಿ ವೃತ್ತಿಯನ್ನು ಪ್ರಾರಂಭಿಸುವುದಕ್ಕೆ ರಾಜ್ಯ ಸರ್ಕಾರ ಪುನರ್ ಚಿಂತನೆ ಮಾಡುತ್ತಿದೆ. ಕೇರಳ ಮತ್ತು ಗೋವಾ ತಮ್ಮ ರಾಜ್ಯಗಳಲ್ಲಿ ಲಾಟರಿ ವೃತ್ತಿಗೆ ಅವಕಾಶ ಮಾಡಿಕೊಟ್ಟಿವೆ. ಆ ರಾಜ್ಯಗಳು ಅದರ ಮೂಲಕ ಒಳ್ಳೆಯ ಆದಾಯವನ್ನು ಪಡೆಯುತ್ತಿವೆ. ಅದನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕ ಸರ್ಕಾರವು ಲಾಟರಿ ವೃತ್ತಿಯನ್ನು ಪುನರ್ ಪ್ರಾರಂಭಿಸಲು ಯೋಚಿಸುತ್ತಿದೆ. ಕರ್ನಾಟಕ ಯೋಜನಾ ಸಮಿತಿಯ ಉಪಾಧ್ಯಕ್ಷರಾಗಿರುವ ಶ್ರೀ.ಸಿ.ಇಬ್ರಾಹಿಮ್ ಈ ಸಲಹೆಯನ್ನು ಕೊಟ್ಟಿದ್ದಾರೆ. ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ಸಂಪನ್ಮೂಲ ಯಾವಾಗಲೂ ಬೇಕೆ ಬೇಕು. ನಿರಂತರವಾಗಿ ಸಾಗುವ ಸರ್ಕಾರದ ಅಭಿವೃದ್ಧಿ ಯೋಜನೆಗಳಿಗೆ ಕೊನೆ ಮೊದಲಿಲ್ಲದ ರಾಜಕಾರಣಿಗಳ ತಿಕ್ಕಲುತನದ ಯೋಜನೆಗಳಿಗೆ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹದ ಪೈಪೋಟಿಗೆ ಹಣ ಎಷ್ಟು ಬಂದರೂ ಸಾಲದು. ಹಣದ ಆದಾಯಕ್ಕಾಗಿ ಸರ್ಕಾರಗಳು ಪ್ರಜೆಗಳನ್ನೆ ಬಲಿಕೊಡಲು ಹೇಸುವುದಿಲ್ಲ. ಸ್ವತಂತ್ರ ಭಾರತದ ಸರ್ವಾಧಿಕಾರಿಯನ್ನಾಗಿ ತಮ್ಮನ್ನು ನಿಯುಕ್ತಿಗೊಳಿಸಿದ್ದೇ ಆದರೆ ಯಾವ ಪರಿಹಾರವನ್ನೂ ಕೊಡದೆ ಮದ್ಯದ ವ್ಯಾಪಾರವನ್ನು ನಿಲ್ಲಿಸುವುದಕ್ಕಾಗಿ ಮಹಾತ್ಮಾಗಾಂಧಿ ಘೋಷಿಸಿದ್ದರು. ಅಂಥ ಮಹಾತ್ಮನ ದೇಶದಲ್ಲಿ ಲಾಟರಿ ಟಿಕೇಟ್ ವ್ಯಾಪಾರ, ಹೆಂಡದ ವ್ಯಾಪಾರ ಎಗ್ಗಿಲ್ಲದೆ ಸಾಗುತ್ತಿದೆ. ಲಾಟರಿ ಮತ್ತು ಮದ್ಯಪಾನ ಸಮಾಜದ ಆರೋಗ್ಯ ಭಾಗ್ಯಕ್ಕೆ ಎರಡು ಶಾಪಗಳಿದ್ದಂತೆ. ಆರ್ಥಿಕವಾಗಿ ದುಸ್ಥಿತಿಯಲ್ಲಿರುವವರಿಗಂತೂ ಲಾಟರಿ ಮತ್ತು ಮದ್ಯಪಾನ ಮತ್ತು ಕುದುರೆ ಜೂಜು ತಮ್ಮ ಜೀವನ ಹಾಳುಮಾಡಿಕೊಳ್ಳಲು ರಹದಾರಿಯಂತಿವೆ. ಕಲ್ಯಾಣಯುತ ಸಮಾಜ (Welfare State) ಮತ್ತು ಪ್ರಜಾಪ್ರಭುತ್ವ ಸಮಾಜ ನಿರ್ಮಿಸಲು ಹೊರಟಿರುವ ಸರ್ಕಾರಗಳು ಆ ಎರಡು ಆದರ್ಶಗಳಿಗೆ ವಿರೋಧವಾದ ಲಾಟರಿ ವೃತ್ತಿ ಮತ್ತು ಮದ್ಯ ಸರಬರಾಜು ನಡೆಸಿಕೊಂಡು ಬರಲು ಸರ್ಕಾರ ಯೋಚಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿಯೆಂಬುದನ್ನು ಪ್ರಜಾಪ್ರಭುತ್ವ ವ್ಯವಸ್ಥೆ ನಡೆಸಿಕೊಂಡು ಬರುವ ಜವಾಬ್ದಾರಿ ಹೊತ್ತಿರುವ ಪ್ರಜೆಗಳೆಲ್ಲರೂ ಚಿಂತನೆ ಮಾಡಬೇಕು. ✷

# ಬಂದಿದೆ ಚಳುವಳಿಗೆ ಕಾಲ!

– ಸುರೇಂದ್ರ ಕೌಲಗಿ

('ಬ್ರಿಟೀಷ್ ಸರ್ಕಾರ ಬಲಿಷ್ಠ ಸರ್ಕಾರವೆಂಬುವುದರಲ್ಲಿ ನನಗೆ ಸಂಶಯವಿಲ್ಲ. ಹಾಗೆಯೇ ಸತ್ಯಾಗ್ರಹವೂ ಎಲ್ಲ ಸಂಕಟಗಳಿಗೂ ಸಾರ್ವಭೌಮ ಎಂಬುವುದರಲ್ಲಿಯೂ ನನಗೆ ಸಂಶಯವಿಲ್ಲ' – ಮಹಾತ್ಮ ಗಾಂಧೀಜಿ– ೧೯೧೫)

೨೦೧೪ರ ಮಹಾ ಚುನಾವಣೆಯ ನಂತರ ದೇಶದಲ್ಲಿ ಆಗುತ್ತಿರುವ ರಾಜಕೀಯ ಮತ್ತು ಆರ್ಥಿಕ ಬೆಳವಣಿಗೆಗಳಿಂದಾಗಿ ಚಳುವಳಿಗಳ ಪರ್ವ ಪ್ರಾರಂಭವಾಗಿದೆ; ಚಳುವಳಿಗೆ ಕಾಲ ಬಂದಿದೆ. ಈ ವರ್ಷ ಕೇಂದ್ರ ಸರ್ಕಾರ ಹೊರಡಿಸಿರುವ ಭೂ ಸ್ವಾಧೀನ ಸುಗ್ರೀವಾಜ್ಞೆ, ಅರಣ್ಯ ರಕ್ಷಣಾ ಕಾನೂನು, ವನ್ಯ ಜೀವಿ ರಕ್ಷಣಾ ಕಾನೂನು, ನೀರು ಮತ್ತು ವಾಯು ಮಾಲಿನ್ಯ ಕಾನೂನು ಮುಂತಾದ ಎಲ್ಲ ಸಮಾಜ ಹಿತ ಕಾನೂನುಗಳನ್ನು ತ್ವರಿತ ಅಭಿವೃದ್ಧಿಯ ಕಾರಣಕ್ಕಾಗಿ ಹಾಗೂ 'Make In India' ಎಂಬ ಆರ್ಥಿಕ ಬಲವರ್ಧನೆಯ ಕಾರಣಕ್ಕಾಗಿ ಕೇಂಧ್ರ ಸರ್ಕಾರ ಬಹಳಷ್ಟು ಸಡಿಲುಗೊಳಿಸಿದೆ. ಇದರ ಪರಿಣಾಮವಾಗಿ ಹಿಮಾಲಯ ಮತ್ತು ಪಶ್ಚಿಮ ಘಟ್ಟಗಳಂಥ ಪರಿಸರ ಸೂಕ್ಷ್ಮ ಪ್ರದೇಶಗಳು ನಾಶವಾಗಲಿವೆ. ಸಾಗರಗಳು ಜಲಚರಗಳಿಲ್ಲದೆ ಬರಡಾಗುವ ಅಪಾಯ ಉಂಟಾಗುತ್ತಿದೆ. ಭಾರತಕ್ಕೆ ಅಮೇರಿಕಾದ ಅಧ್ಯಕ್ಷ ಒಬಾಮಾರ ಭೇಟಿಯ ನಂತರ ಭಾರತದ ಆರ್ಥಿಕ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ವಿದೇಶೀ ವಾಣಿಜ್ಯ ಕಂಪನಿಗಳ ಆಗಮನ ಭರದಿಂದ ಸಾಗಿದೆ. ರೈಲ್ವೆ ಮತ್ತು ರಕ್ಷಣಾ ಇಲಾಖೆಯಂಥ ಮಹತ್ವದ ಇಲಾಖೆಗಳಲ್ಲಿ ವಿದೇಶೀ ಕಂಪನಿಗಳ ಭಾಗಿದಾರಿಕೆ ಹೆಚ್ಚುತ್ತಲಿದೆ. ಕೃಷಿ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳೆರಡೂ ೧೦೦ಕ್ಕೆ ೧೦೦ರಷ್ಟು ವ್ಯಾಪಾರೀಕರಣಗೊಳ್ಳುತ್ತಿವೆ. ಇಂಗ್ಲೀಷ್ ಭಾಷೆಯ ಧಾಳಿಯಿಂದಾಗಿ ದೇಶೀಯ ಭಾಷೆಗಳು ಅವಸಾನದ ಅಂಚಿಗೆ ಹೋಗುತ್ತಿವೆ. ಅನೇಕ ಪ್ರಕಾರದ ಬೃಹತ್ ಅಭಿವೃದ್ಧಿ ಕಾಮಗಾರಿಗಳ ಕಾರಣದಿಂದಾಗಿ ಕೃಷಿ ಭೂಮಿ ದಿನೇ ದಿನೇ ಕಡಿಮೆಯಾಗುತ್ತಿದೆ. ವ್ಯವಸಾಯ ಮಾಡುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ವಾಯುಮಾಲಿನ್ಯ ಹೆಚ್ಚಾಗುತ್ತಿದೆ. ಹೀಗೆ ಇಂದು ನಮ್ಮ ದೇಶದ ಸಮಾಜದ ಮುಂದೆ ನೂರೆಂಟು ಸಮಸ್ಯೆಗಳು ಬಂದು ನಿಂತಿವೆ. ಈ ಎಲ್ಲ ಸಮಸ್ಯೆಗಳು ಭಯಾನಕವಾಗಿವೆಯಷ್ಟೇ ಅಲ್ಲ ಕ್ರಮೇಣ ಅವುಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಮತ್ತು ಅವು ಬಲಿಷ್ಠವಾಗುವ ಸಂಕೇತಗಳು ಸ್ಪಷ್ಟವಾಗಿ ಕಾಣುತ್ತಿವೆ. ಇದು ಸಾಲದೆಂಬಂತೆ ದೇಶದಲ್ಲಿ ಕೋಮುವಾದದ ಭಾವನೆ ಬೆಳೆಯುವಂಥ

ವಾತಾವರಣ ನಿರ್ಮಾಣವಾಗುತ್ತಿದೆ. ಸಂವಿಧಾನದ ಮುಖ್ಯ ಆಶಯಗಳಾದ 'ಜಾತ್ಯಾತೀತತೆ' ಮತ್ತು 'ಸಮಾಜವಾದ' ಎಂಬ ಎರಡು ವಿಚಾರಗಳು ಲುಪ್ತವಾಗುತ್ತಿರುವಂತೆ ಕಾಣುತ್ತಿದೆ. ಈ ಎಲ್ಲ ಸಮಸ್ಯೆಗಳನ್ನು ಗಮನಿಸಿದರೆ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟಿರುವ ಯಾರೊಬ್ಬರೂ ಸುಮ್ಮನೆ ಪ್ರೇಕ್ಷಕರಾಗಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಉಂಟಾಗುತ್ತಿರುವಂಥ ಮೇಲ್ಕಾಣಿಸಿದ ಸಮಸ್ಯೆಗಳ ಪರಿಹಾರಕ್ಕಾಗಿ ದೇಶದ ಜನತೆ ಹಲವಾರು ಬಗೆಯ ಚಳುವಳಿಗಳನ್ನು ಪ್ರಾರಂಭಿಸಬೇಕಾಗಿದೆ. ಸತ್ಯಾಗ್ರಹಗಳನ್ನು ಹೂಡಬೇಕಿದೆ. ೨೦೧೯ರ ಸಾರ್ವತ್ರಿಕ ಚುನಾವಣೆಯ ವೇಳೆಯ ಒಳಗಾಗಿ ದೇಶದ ಜನತೆ ಈ ಎಲ್ಲ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ದಾರಿಯನ್ನು ಹುಡುಕಬೇಕಿದೆ. ಇಂದಿನ ಪ್ರಜಾಪ್ರಭುತ್ವದ ರೀತಿ ನೀತಿಯನ್ನು ಬದಲಾಯಿಸಬೇಕಿದೆ. ರಾಜಕಾರಣಿಗಳ ಮೇಲೆ ಮತ್ತು ಸರ್ಕಾರದ ಮೇಲೆ ಮತದಾರರ ನಿಯಂತ್ರನ ಸಾಧಿತವಾಗಬೇಕಿದೆ. ಜನತೆಯನ್ನು ತಮ್ಮ ಇಚ್ಛಾನುಸಾರ ಬಗ್ಗಿಸಬಹುದೆಂಬ ಮನೋಭಾವ ರಾಜಕೀಯ ಪಕ್ಷಗಳಲ್ಲಿ, ಸರ್ಕಾರಗಳಲ್ಲಿ ಮತ್ತು ಅಧಿಕಾರಿಗಳಲ್ಲಿ ಬೇರೂರಿದೆ. ಅವರಲ್ಲಿಯ ಈ ಅಹಂಕಾರದ ಭಾವನೆ ತೊಲಗುವಂತೆ ದೇಶದ ಪ್ರಜೆಗಳು ಮಾಡಬೇಕಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ರಾಜ್ಯ ಮಟ್ಟದ ಚುನಾವಣೆಗಳು ನಡೆಯಲಿವೆ. ಆ ಚುನಾವಣೆಗಳ ಸಂದರ್ಭದಲ್ಲಿ ದೇಶದ ಮತದಾರರು ಹೊಸ ಬದಲಾವಣೆ ತರುವ ರೀತಿಯಲ್ಲಿ ಮತಚಲಾಯಿಸಬೇಕು. ಇತ್ತೀಚೆಗೆ ತಾನೆ ಮುಗಿದ ದಿಲ್ಲಿ ಚುನಾವಣೆಯಲ್ಲಿ ಮತದಾರರು ತೋರಿಸಿದ ಪ್ರಬುದ್ಧತೆಯನ್ನು ನಡೆಯಲಿರುವ ಚುನಾವಣೆಗಳ ರಾಜ್ಯಗಳಲ್ಲಿಯ ಜನತೆಯು ತೋರಿಸಬೇಕು. ತನ್ಮೂಲಕ ೨೦೧೯ರಲ್ಲಿ ನಡೆಯುವ ಮಹಾ ಚುನಾವಣೆಯಲ್ಲಿ ಇಂದಿನ ಸರ್ಕಾರಕ್ಕೆ ಬಹು ಭಿನ್ನವಾದ ಸರ್ಕಾರವನ್ನು ಅಧಿಕಾರಕ್ಕೆ ತರುವಂತಾಗಬೇಕು. ಈ ಲೇಖನದ ಒಂದು ಕಡೆ ನಮೂದಿಸಿರುವ ಸಮಸ್ಯೆಗಳಿಗೆ ಪರಿಹಾರ ದೊರಕಿಸುವಂಥ ಸರ್ಕಾರ ಕೇಂದ್ರದಲ್ಲಿ ಬರಬೇಕು. ಅದಕ್ಕಾಗಿ ವಿಷಯಾಧಾರಿತ ಮತ್ತು ಸಮಸ್ಯಾಧಾರಿತ ವಿಷಯಗಳನ್ನು ಕೈಗೆತ್ತಿಕೊಂಡು ಜನರು ತಮ್ಮ ತಮ್ಮ ಪ್ರದೇಶಗಳಲ್ಲಿಯೇ ಜನತಾ ಚಳುವಳಿಗಳನ್ನು ಪ್ರಾರಂಭಿಸಬೇಕು. ಈಗಾಗಲೇ ಪ್ರಾರಂಭವಾಗಿರುವ ಕೆಲ ಚಳುವಳಿಗಳ ಉದಾಹರಣೆಯನ್ನು ಕೊಡಬಹುದು. ಕೇಂದ್ರ ಸರ್ಕಾರ ಇತ್ತೀಚೆಗೆ ಹೊರಡಿಸಿದ ಭೂ ಸ್ವಾಧೀನ ಸುಗ್ರೀವಾಜ್ಞೆ ವಿರುದ್ಧ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ಚಳುವಳಿ ಪ್ರಾರಂಭವಾಗಿದೆ. ಕರ್ನಾಟಕ ರಾಜ್ಯ ರೈತ ಸಂಘವೂ ಆ ಚಳುವಳಿಯಲ್ಲಿ ಭಾಗವಹಿಸುತ್ತಿದೆ. ಕೈ ಮಗ್ಗದ ಸಮಸ್ಯೆಯನ್ನು ಕೈಗೆತ್ತಿಕೊಂಡು ಹೆಗ್ಗೋಡಿನ ಪ್ರಸನ್ನರ ನೇತೃತ್ವದಲ್ಲಿ ಚಳುವಳಿ ಪ್ರಾರಂಭವಾಗಿದೆ. ಕೈಮಗ್ಗ ಎಲ್ಲ ಪ್ರಕಾರದ ಸುಸ್ಥಿರ ಅಭಿವೃದ್ಧಿ ಚಳುವಳಿಗಳ ಹೋರಾಟದ ಸಂಕೇತವಾಗಿದೆ. ಕೈಮಗ್ಗದ ವಿಷಯವನ್ನು ಕೇಂದ್ರದಲ್ಲಿರಿಸಿಕೊಂಡು ಸುಸ್ಥಿರ ಅಭಿವೃದ್ಧಿಗಾಗಿ ಹೋರಾಟ

ಮಾಡುತ್ತಿರುವ ಎಲ್ಲರೂ ಈ ಚಳುವಳಿಯಲ್ಲಿ ಕೈ ಜೋಡಿಸಬೇಕಿದೆ. ಜನತಾ ಚಳುವಳಿಯೊಂದು ಸರ್ಕಾರವನ್ನು ಹೇಗೆ ದಾರಿಗೆ ತರಬಹುದೆಂಬುದನ್ನು ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಹೆಚ್.ಎಸ್.ದೊರೆಸ್ವಾಮಿಯವರು ತೋರಿಸಿಕೊಟ್ಟಿದ್ದಾರೆ. ಬೆಂಗಳೂರು ನಗರದ ತ್ಯಾಜ್ಯದಿಂದ ನರಕ ವಾಸ ಅನುಭವಿಸುತ್ತಿದ್ದ ಮಂಡೂರು ಎಂಬ ಪುಟ್ಟ ಗ್ರಾಮದ ಜನರು ಹೋರಾಟ ಮಾಡಿ ತೋರಿಸಿದ್ದಾರೆ. ಮಂಡೂರು ಹೋರಾಟ ನಮ್ಮೆಲ್ಲರಿಗೂ ಚಳುವಳಿ ನಡೆಸಲು ಸ್ಫೂರ್ತಿಕೊಡುವಂತದ್ದಾಗಿದೆ. ಅಣು ಸ್ಥಾವರದ ವಿರುದ್ಧ ತಮಿಳುನಾಡಿನ ಕೂಡಂಕುಳಂ ಎಂಬಲ್ಲಿ ಅಲ್ಲಿನ ಜನತೆ ನಡೆಸಿದ ಹೋರಾಟ ಕೂಡ ಪ್ರೇರಣೆಕೊಡುವಂಥದ್ದಾಗಿದೆ. ಅದೇ ರೀತಿ ಉತ್ತರ ಕರ್ನಾಟಕದ ಕೂಡಗಿ ಎಂಬಲ್ಲಿ ಕಲ್ಲಿದ್ದಲಾಧಾರಿತ ವಿದ್ಯುತ್ ಉತ್ಪಾದನೆಯ ಸ್ಥಾವರದ ವಿರುದ್ಧ ಸತತವಾಗಿ ಹೋರಾಟ ನಡೆಸುತ್ತಿರುವುದು ಕೂಡ ಮಾದರಿಯಾಗಿದೆ. ಅಸ್ಸಾಂ ರಾಜ್ಯದ ಯುವತಿ ಶರ್ಮಿಳ ಎಂಬುವರು ಸೈನಿಕರಿಗೆ ಕೊಡಲಾಗಿರುವ ಅನಿರ್ಬಂಧಿತ ಕೋವಿಯ ಉಪಯೋಗದ ಕಾನೂನಿನ ವಿರುದ್ಧ ೧೪ ವರ್ಷಗಳಿಂದ ಸತ್ಯಾಗ್ರಹ ಮಾಡುತ್ತಿರುವುದು ಒಂದು ಅಸಾಧಾರಣ ಅಹಿಂಸಾತ್ಮಕ ಚಳುವಳಿಯ ಸಂಕೇತವಾಗಿದೆ. ಇದೇ ರೀತಿ ಬೆಂಗಳೂರು ಮಹಾ ನಗರದಲ್ಲಿ ಆಗುತ್ತಿರುವ ಭೂಕಬಳಿಕೆ ವಿರುದ್ಧ ಎ.ಕೆ.ರಾಮಸ್ವಾಮಿ ವರದಿಯನ್ನು ಆಧಾರವಾಗಿಟ್ಟುಕೊಂಡು ನಡೆದ ಹೋರಾಟವು ಇನ್ನೊಂದು ಉದಾಹರಣೆಯಾಗಿದೆ. ಸರ್ಕಾರಗಳು ಎಷ್ಟೇ ಬಲಿಷ್ಠವಾಗಿರಲಿ ಜನತೆ ಒಗ್ಗಟ್ಟಿನಿಂದ ನಡೆಸುವ ಚಳುವಳಿಗಳ ನೈತಿಕ ಶಕ್ತಿಯ ಪ್ರದರ್ಶನದ ಮುಂದೆ ಅವುಗಳ ಆಟ ನಡೆಯಲಾರದು. ಇದಕ್ಕೆ ಬಲಿಷ್ಠ ಇಂಗ್ಲೀಷ್ ಸರ್ಕಾರದ ವಿರುದ್ಧ ನಡೆಸಿದ ಗಾಂಧೀಜಿಯವರ ವಿವಿಧ ಸತ್ಯಾಗ್ರಹಗಳ ಉದಾಹರಣೆ ನಮ್ಮ ಮುಂದೆ ಇವೆ. ಇಂದಿರಾಗಾಂಧಿಯವರ ನಿರಂಕುಶ ಆಡಳಿತದ ವಿರುದ್ಧ ಜಯಪ್ರಕಾಶ ನಾರಾಯಣರ ಸಂಪೂರ್ಣ ಕ್ರಾಂತಿಯ ಹೋರಾಟದ ಉದಾಹರಣೆ ನಮ್ಮ ಮುಂದೆ ಇದೆ. ಚಳುವಳಿಗಳ ಇಂಥ ಪರಂಪರೆಯಿರುವ ನಮ್ಮ ದೇಶದಲ್ಲಿ ಜನತೆ ಬಿಕ್ಕಟ್ಟಿನ ಸಮಯ ಬಂದಾಗಲೆಲ್ಲ ಹೋರಾಟ ನಡೆಸಿದೆ, ಚಳುವಳಿಗಳನ್ನು ಮಾಡಿದೆ. ಆದ್ದರಿಂದ ದೇಶದ ಭೌತಿಕ ಅಭಿವೃದ್ಧಿ ಮತ್ತು ಸರಾಸರಿ ತಲಾ ಆದಾಯದ (ಜಿ.ಡಿ.ಪಿ) ವಿಚಾರಗಳನ್ನು ಮಾತ್ರ ಗಮನದಲ್ಲಿರಿಸಿಕೊಂಡು ಇಂದಿನ ಸರ್ಕಾರ ಹೂಡಿರುವ ಅಭಿವೃದ್ಧಿಯೆಂಬ ನಾಟಕದ ವಿರುದ್ಧ ಜನತೆ ಚಳುವಳಿಗಳನ್ನು ಪ್ರಾರಂಭಿಸುವುದು ತುರ್ತು ಅಗತ್ಯವಾಗಿದೆ. ಸಮಯ ಜಾರುತ್ತಿದೆ. ಪರಿಸ್ಥಿತಿ ಕೈ ಮೀರುತ್ತಿದೆ. ಜನತೆಯ ನೆಮ್ಮದಿಗೆ ಭಂಗ ಬರುತ್ತಿದೆ. ಯುವಕರು ದಾರಿ ತಪ್ಪುತ್ತಿದ್ದಾರೆ, ಮಹಿಳೆಯರ ಮಾನ ಹೋಗುತ್ತಿದೆ. ಶಿಕ್ಷಣ ದಿಕ್ಕೆಟ್ಟಿದೆ. ಆದ್ದರಿಂದ ಕಾಲ ಮಿಂಚುವ ಮೊದಲೆ ಚಳುವಳಿಗಳು ಪ್ರಾರಂಭವಾಗಬೇಕು.

# ನೆಲದ ಭಾಷೆ ಮತ್ತು ಕಲಿಕೆಯ ಮಾಧ್ಯಮ

– ಪ್ರಸಾದ್ ರಕ್ಷಿದಿ

ಭಾರತದ ಸರ್ವೋಚ್ಚ ನ್ಯಾಯಾಲಯ 'ಮಕ್ಕಳಿಗೆ ಯಾವ ಭಾಷಾ ಮಾಧ್ಯಮದಲ್ಲಿ ವಿದ್ಯೆ ನೀಡಬೇಕೆನ್ನುವುದನ್ನು ನಿರ್ಧರಿಸುವ ಹಕ್ಕು ಪೋಷಕರದ್ದು' ಎಂದು ತೀರ್ಪು ನೀಡಿದೆ. ಈ ತೀರ್ಪು ಭಾರತದ ಸಂವಿಧಾನದ ಅಡಿಯಲ್ಲಿ ಮಾತ್ರವಲ್ಲ ಯಾವುದೇ ಪ್ರಜಾಪ್ರಭುತ್ವ ದೇಶದ ನ್ಯಾಯಾಲಯ ನೀಡಬಹುದಾದ, ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವ ಸಹಜವಾದ ತೀರ್ಪಿನಂತೇ ಇದೆ. ಆದರೆ ಇದರ ಸಾಧಕ ಭಾಧಕಗಳ ಚರ್ಚೆಯಾಗಬೇಕಾಗಿರುವುದು, ಭಾರತದಂತಹ ಬಹುಭಾಷಾ, ಬಹುಜಾತೀಯ ಮತ್ತು ಬಹು ಸಂಸ್ಕೃತಿಯ ಸಮಾಜದ ಹಿನ್ನೆಲೆಯಲ್ಲಿ. ಇಲ್ಲಿ ಕನ್ನಡದ ಸಂದರ್ಭವನ್ನು ಮಾತ್ರ ಪರಿಗಣಿಸಿ ಈವಿಚಾರಗಳನ್ನು ಹೇಳುತ್ತಿದ್ದೇನಾದರೂ ಹಿಂದಿ ಭಾಷೆಯನ್ನಾಡುವ ಪ್ರದೇಶಗಳನ್ನುಳಿದು ಬೇರೆ ಎಲ್ಲಾ ಪ್ರಾದೇಶಿಕ ಭಾಷೆಗಳ ಸ್ಥಿತಿ ಹೆಚ್ಚು ಕಡಿಮೆ ಒಂದೇ ಆಗಿದೆ. ಹಿಂದಿ ಭಾಷೆಯು ಕೇಂದ್ರ ಸರ್ಕಾರದಿಂದ ವಿಶೇಷ ಪೋಷಣೆಯನ್ನು ಪಡೆಯುತ್ತಿದ್ದರೂ ಸಹ ಕಲಿಕಾ ಮಾಧ್ಯಮದ ವಿಚಾರಕ್ಕೆ ಬಂದಾಗ ಇಂಗ್ಲಿಷ್‌ನೊಂದಿಗೆ ಅವರಿಗೂ ಸಮಸ್ಯೆಗಳಿವೆ.

ಸಾಮಾನ್ಯವಾಗಿ ನಾವು ಮಾತನಾಡುವಾಗ, ನಮ್ಮ ಎಲ್ಲ ಭಾವನೆಗಳನ್ನು ವ್ಯಕ್ತಪಡಿಸಲು, ಸಹಜವಾಗಿ ಯೋಚಿಸಲು, ಪ್ರಪಂಚದ ಎಲ್ಲ ಅನುಭವಗಳನ್ನು ಮತ್ತು ಅದರ ಮೂಲಕ ದೊರೆಯುವ ಜ್ಞಾನವನ್ನು ಸ್ವೀಕರಿಸಿ ಗ್ರಹಿಸಲು ಮಾತೃಭಾಷೆಯಲ್ಲಿ ಮಾತ್ರ ಸಾಧ್ಯ ಎಂದು ಹೇಳುತ್ತಲೇ ಇರುತ್ತೇವೆ. ಇದಕ್ಕೊಂದು ತಮಾಷೆಯ ಉದಾಹರಣೆಯನ್ನು ನೀಡುತ್ತೇನೆ. ಸುಮಾರು ಮೂವತ್ತು ವರ್ಷಗಳಕಾಲ ಆಸ್ಟ್ರೇಲಿಯಾದಲ್ಲಿ ವಿಜ್ಞಾನಿಯಾಗಿದ್ದು ಇದೀಗ ವಾಪಸ್ ಬಂದು ಹಳ್ಳಿಯಲ್ಲಿ ನೆಲೆಸಿದವರೊಬ್ಬರು ಇತ್ತೀಚೆಗೆ ಪರಿಚಯವಾದರು. ಅವರು ಆಸ್ಟ್ರೇಲಿಯಾದಲ್ಲಿನ ಅನುಭವಗಳ ಬಗ್ಗೆ ಮಾತನಾಡುತ್ತ ಒಂದು ವಿಚಾರವನ್ನು ಹೇಳಿದರು. ಅವರು ಅಲ್ಲಿದ್ದಾಗ ಯಾರಿಗಾದರೂ ಬಯ್ಯುತ್ತಿದ್ದರೆ ಮಾತು ತನ್ನಷ್ಟಕ್ಕೆ ಕನ್ನಡ ಬಾಷೆಗೆ ಹೊರಳುತ್ತಿತ್ತಂತೆ!. ಅಂದರೆ ನಾವು ಕಲಿತ ಭಾಷೆಯಲ್ಲಿ ಪೂರ್ಣ ಅಭಿವ್ಯಕ್ತಿ ಕಷ್ಟ ಎನ್ನುವುದನ್ನವರು ಪರೋಕ್ಷವಾಗಿ ತಿಳಿಸಿದರು. ಆದರೆ ನಾವು ವ್ಯಾವಹಾರಿಕ ಜಗತ್ತಿಗೆ ಬಂದಾಗ ಇಂಗ್ಲಿಷ್ ಭಾಷೆಯೇ ನಮ್ಮ ಆದ್ಯತೆಯಾಗಿಬಿಡುತ್ತದೆ. ಇದಕ್ಕೆ ಹಲವು

ಕಾರಣಗಳಿವೆ.

ಮಾತೃಭಾಷೆ ಎನ್ನುವ ಪದವೇ ಸ್ವಲ್ಪ ಗೊಂದಲವುಂಟುಮಾಡುವಂಥದ್ದು ಕರ್ನಾಟಕದಲ್ಲೇ, ತುಳು, ಕೊಡವ, ಮುಂತಾದ ಪ್ರಾದೇಶಿಕ ಭಾಷೆಗಳಿದ್ದ ಹಾಗೆ ಬಂಜಾರ, ಅರೆಗನ್ನಡ, ಹೈಗ, ಬೋವಿ, ಬ್ಯಾರಿ ಮುಂತಾದ ಜನಾಂಗೀಯ ಭಾಷೆಗಳಿವೆ. ತಮಿಳು, ತೆಲುಗು, ಉರ್ದು, ಕೊಂಕಣಿ. ಮಲೆಯಾಳಂ, ಭಾಷಿಕರಿದ್ದಾರೆ. ನಾವು ಮನೆಯಲ್ಲಿ ಆಡುವ ಮಾತನ್ನು ಮಾತೃಭಾಷೆ ಎಂದುಕೊಂಡರೆ, ಮಧ್ಯ ಕರ್ನಾಟಕದ ಅಚ್ಚಕನ್ನಡದ ನೆಲದಲ್ಲೂ ನಾವು ಹೊರಗೆ ಮಾತನಾಡುವ ಕನ್ನಡಕ್ಕೂ ಮನೆ ಮಾತಿಗೂ ತುಂಬ ವೆತ್ಯಾಸಗಳಿವೆ. ಇವರೆಲ್ಲರಿಗೂ ತಮ್ಮ ಭಾಷೆಯಲ್ಲೇ ಮಕ್ಕಳಿಗೆ ಶಿಕ್ಷಣ ಕೊಡಿಸುವ ಹಕ್ಕು ಸಂವಿಧಾನಾತ್ಮಕವಾಗಿ, ಇದೀಗ ನ್ಯಾಯಾಲಯದ ಮೂಲಕ ದೊರೆತಿದೆ. ಈಗ ಅಧಿಕೃತವಲ್ಲದ ಭಾಷೆಗಳವರೂ ತಮ್ಮ ಭಾಷೆಗಳನ್ನು ಅಧಿಕೃತಗೊಳಿಸಿ ಶಿಕ್ಷಣ ಸೌಲಭ್ಯವನ್ನು ಕೊಡಿ ಎಂದು ಕೇಳಬಹುದು. ಆದ್ದರಿಂದ ಮಾತೃಭಾಷೆಯೆಂಬ ಸುಂದರವಾದ ಪದವನ್ನು ಪಕ್ಕಕ್ಕಿಟ್ಟು, ಪರಿಸರದ ಭಾಷೆ ಅಥವಾ ಆ ರಾಜ್ಯದಲ್ಲಿ ಅಧಿಕೃತವಾಗಿ ಆಡಳಿತ– ವ್ಯವಹಾರಗಳಲ್ಲಿರುವ ಪ್ರಾದೇಶಿಕ ಭಾಷೆ ಎಂಬ ಪದವನ್ನು ಬಳಸಿದರೆ ಸ್ವಲ್ಪಮಟ್ಟಿನ ಖಚಿತತೆ ಬಂದೀತು.

ಈಗ ನಮ್ಮ ಪ್ರಾದೇಶಿಕ ಭಾಷೆಗಳಿಗೆ ನ್ಯಾಯಾಲಯದ ತೀರ್ಪಿನಿಂದ ಬಂದ ಕುತ್ತಿನ ಬಗ್ಗೆ ಚರ್ಚಿಸುವ ಮೊದಲು ಎರಡು ಉದಾಹರಣೆಗಳನ್ನು ಕೊಡುತ್ತೇನೆ. ಕೆಲವು ವರ್ಷಗಳ ಹಿಂದೆ ನಮ್ಮೂರು ಸಕಲೇಶಪುರದಲ್ಲಿ ಒಬ್ಬರು ಶಿಕ್ಷಣಾಧಿಕಾರಿಗಳಿದ್ದರು. ತುಂಬ ದಕ್ಷರೆಂದೂ ಸಜ್ಜನರೆಂದೂ ಹೆಸರಾದವರು. ಆ ಕಾಲದಲ್ಲೇ ಸಕಲೇಶಪುರದಲ್ಲಿ ಎರಡು ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳಿದ್ದವು. ಸರ್ಕಾರಿ ಪ್ರೌಢಶಾಲೆಯಲ್ಲೂ ಇಂಗ್ಲಿಷ್ ಮಾಧ್ಯಮ ಇತ್ತು. ಸಕಲೇಶಪುರದ ಬೇರೆಲ್ಲ ಅಧಿಕಾರಿಗಳ ಮಕ್ಕಳು ಖಾಸಗಿ ಶಾಲೆಗೆ ಹೋಗುತ್ತಿದ್ದರು. ಆದರೆ ಈ ಶಿಕ್ಷಣಾಧಿಕಾರಿಯವರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿದ್ದರು. ಯಾರೋ ಈಬಗ್ಗೆ ಅವರಲ್ಲಿ ಪ್ರಶ್ನಿಸಿದಾಗ ಅವರೆಂದರು "ನಾನೇ ಶಿಕ್ಷಣಾಧಿಕಾರಿಯಾಗಿ ನನ್ನ ಮಕ್ಕಳನ್ನು ಖಾಸಗಿ ಶಾಲೆಗೆ ಕಳುಹಿಸಲೆ?. ನನ್ನ ಮಕ್ಕಳು ಕನ್ನಡಲ್ಲೇ ಕಲಿತು ಒಳ್ಳೆಯವರಾಗಿ ಬಾಳಿದರೆ ಸಾಕು" ಈ ಮಾತು ಇಂದಿಗೆ ಸ್ವಲ್ಪ ಅಪ್ರಸ್ತುತವೆನಿಸಿಕೊಳ್ಳುವ ಆದರ್ಶದ ಸ್ಥಿತಿಯೆನಿಸಿದರೂ ಇಂಥವರು ಈಗಲೂ ಇದ್ದಾರೆ. ಆದರೆ ಇಂತಹ ಉದಾಹರಣೆಯನ್ನು ಸಾರ್ವತ್ರಿಕವಾಗಿ ನಾವು ಕಾಣಲು ಸಾಧ್ಯವಿಲ್ಲ.

ಎರಡನೆಯದು; ಇತ್ತೀಚೆಗೆ ಸಕಲೇಶಪುರದಲ್ಲಿ ಸಾಹಿತ್ಯ ಸಮ್ಮೇಳನ ನಡೆಯಿತು. ಅಂದಿನ ಗೋಷ್ಟಿಯೊಂದರಲ್ಲಿ ಬ್ಯಾಂಕಿನ ಅಧಿಕಾರಿಯೊಬ್ಬರು ಮಾತನಾಡುತ್ತಾ "ನಾವು ಕನ್ನಡ ಉಳಿಯಬೇಕೆನ್ನುತ್ತೇವೆ, ಆದರೆ ಉಳಿಸುವ ಪ್ರಯತ್ನವಾಗಿ ನಮ್ಮಲ್ಲಿ ಈಗ

ಇರುವ ಸೌಲಭ್ಯಗಳನ್ನೂ ಬಳಸಿಕೊಳ್ಳದಿದ್ದರೆ ಹೇಗೆ" ಎಂದು ಹೇಳಿ "ಈಗ ಎಲ್ಲ ಎ.ಟಿ.ಎಂ.ಗಳಲ್ಲಿ ಕನ್ನಡದಲ್ಲಿ ವ್ಯವಹರಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ. ಆದರೆ ಅದನ್ನು ಬಳಸುವವರ ತೀರ ಕಡಿಮೆ (ಗ್ರಾಹಕ ಯಾವ ಭಾಷೆಯನ್ನು ಬಳಸುತ್ತಾನೆಂಬ ಅಂಕಿ ಅಂಶವೂ ಎ.ಟಿ.ಎಂ. ಮೂಲಕವೇ ಬ್ಯಾಂಕಿಗೆ ತಿಳಿಯುತ್ತದೆ) ಕನ್ನಡ ಭಾಷಾ ಸೌಲಭ್ಯವನ್ನು ಬಳಸುವವರ ಸಂಖ್ಯೆ ಹೆಚ್ಚಾದರೆ ಇತರ ವ್ಯವಹಾರಗಳಿಗೂ ಕನ್ನಡ ಭಾಷಾ ಸೌಲಭ್ಯ ಕಲ್ಪಿಸುವುದು ಬ್ಯಾಂಕುಗಳಿಗೆ ಅನಿವಾರ್ಯವಾಗುತ್ತದೆ. ಅದಕ್ಕಾಗಿ ಕನ್ನಡ ತಂತ್ರಾಂಶಗಳ ನಿರ್ಮಾಣ ಮಾಡಬೇಕಾಗುತ್ತದೆ. ಕನ್ನಡ ಉದ್ಯೋಗಗಳು ಹೆಚ್ಚುತ್ತವೆ" ಎಂದರು. ಖಂಡಿತವಾಗಿಯೂ ಇದು ಅತ್ಯಂತ "ಪ್ರಾಕ್ಟಿಕಲ್" ಆದಂತಹ ಆದರ್ಶ. ಸಾರ್ವತ್ರಿಕವಾಗಿ ನಾವು ಮಾಡಬಹುದಾದದ್ದು.

ಆದರೆ ಇಂಗ್ಲಿಷ್‌ಜ್ಞಾನ ಅಷ್ಟಾಗಿ ಇಲ್ಲದೆ ಇರುವವರೂ ಸಹ ಹೆಚ್ಚಾಗಿ ಎ.ಟಿ.ಎಂ.ಗಳಲ್ಲಿ. ಬ್ಯಾಂಕಿನ ಇತರ ವ್ಯವಹಾರಗಳಲ್ಲಿ ಇಂಗ್ಲಿಷನ್ನೇ ಬಳಸುತ್ತಾರೆ. ಇದಕ್ಕೆ ಹಲವು ಕಾರಣಗಳಿವೆ. ಅವರಲ್ಲಿ ಅನೇಕರು(ತೀರ ಕಡಿಮೆ ಶಾಲಾವಿದ್ಯಾಭ್ಯಾಸ ಇರುವವರು) ಇಂಗ್ಲಿಷ್ ಬಳಸದಿದ್ದರೆ ಇತರರು ತಮ್ಮನ್ನು ಕೀಳಾಗಿ ಕಾಣುತ್ತಾರೆ ಅಂದುಕೊಳ್ಳುತ್ತಾರೆ. ಇನ್ನು ಕೆಲವರು ಇಂಗ್ಲಿಷ್ ಸುಲಭವೆಂದೋ ಇಲ್ಲವೇ ಆ ಮೂಲಕ ನಾವು ಇಂಗ್ಲಿಷ್ ಕಲಿಯುತ್ತಿದ್ದೇವೆಂದೋ ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಎಷ್ಟೋ ಕಡೆಗಳಲ್ಲಿ ಸರಿಯಾದ ತಂತ್ರಾಂಶ ಮತ್ತು ಭಾಷೆ ಬಳಕೆಯಾಗದೆ ಕನ್ನಡದ ವಿವರಣೆಗಳೇ ಗೊಂದಲಮಯವಾಗಿವೆ.

ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ತೀರ್ಮಾನ, ಪ್ರಾದೇಶಿಕ ಭಾಷೆಗಳು ಮತ್ತು ಜನಸಾಮಾನ್ಯರ ನಡವಳಿಕೆಗಳ ಬಗ್ಗೆ ಯೋಚಿಸೋಣ.

ಎಲ್ಲ ಜನರೂ ಸಾಮಾನ್ಯರೇ. ಆದರೆ ಕಲಿತವಿದ್ಯೆ-ಸಂಸ್ಕಾರಗಳಿಂದ, ಜೀವನಾನುಭವದಿಂದ ಅಸಾಮಾನ್ಯರಾಗಿ ಬೆಳೆಯುತ್ತಾರೆ. ಅಂತಹವರಲ್ಲಿ ಅನೇಕ ವಿಜ್ಞಾನಿಗಳು, ಸಾಹಿತಿಗಳು, ಚಿಂತಕರು, ಜನಪರ ಹೋರಾಟಗಾರರೂ ಇರುತ್ತಾರೆ. ಇವರಲ್ಲಿ ತಮಗೆ ಮಾತ್ರವಲ್ಲ ಸಮಾಜಕ್ಕೆ ಯಾವುದು ಒಳಿತು ಎನ್ನುವುದರ ಬಗ್ಗೆ ತಮ್ಮದೇ ಆದ ಖಚಿತ ನಿಲುವು- ಅಭಿಪ್ರಾಯಗಳಿವೆ. ಹಾಗೆಯೇ ಜನಸಾಮಾನ್ಯರು ಎನಿಸಿಕೊಂಡವರಲ್ಲೂ ಹೆಚ್ಚಿನವರು ಸಜ್ಜನರೂ ತಮ್ಮ ನಾಡು-ನುಡಿಯ ಬಗ್ಗೆ ಅಪಾರ ಅಭಿಮಾನ ಪ್ರೀತಿಗಳನ್ನಿಟ್ಟುಕೊಂಡವರೂ ಇದ್ದಾರೆ. ಆದರೆ ಇದರೊಂದಿಗೆ ಇವರಿಗೆ ಬದುಕು ಕಲಿಸಿಕೊಟ್ಟಂತಹ ವಿವೇಕವಿದೆ. ಪ್ರತಿಕ್ಷಣವೂ ಬದುಕಿನ ಹೋರಾಟವಿದೆ. ಇಂದು ನಾಳೆಯ ಕನಸುಗಳಿವೆ ಒಂದುಕಾಲದಲ್ಲಿ ಕನಸು ಕಾಣಲೂ ಸಾಧ್ಯವಿಲ್ಲದಿದ್ದ ಜನಾಂಗಗಳು ಇಂದು ಕನಸು ಕಾಣುವ ಮಟ್ಟಿಗಾದರೂ ಬೆಳೆದಿವೆ. ಇವೆಲ್ಲದರ ನಡುವೆ ಹಗಲುಗನಸನ್ನು ಮಾರುವ ಮಾಧ್ಯಮಗಳಿವೆ.

ಇದಕ್ಕೆ ಎರಡು ಉದಾಹರಣೆಗಳನ್ನು ನೀಡುತ್ತೇನೆ. ನಮ್ಮೂರಿನಲ್ಲಿ ಗಾರೆಕೆಲಸ

ಮಾಡುತ್ತಿದ್ದವರ ಮಗನೊಬ್ಬ ಮುಂಬೈಗೆ ಹೋದ ಅಲ್ಲಿ ಅಡಿಗೆ ಕೆಲಸ ಕಲಿತು ವೆಸ್ಟ್ ಇಂಡೀಸ್‌ನ ಹಡಗೊಂದರಲ್ಲಿ ಕೆಲಸಕ್ಕೆ ಸೇರಿದ. ಅಲ್ಲೀಗ ಮುಖ್ಯ ಬಾಣಸಿಗನಾಗಿದ್ದಾನೆ. ಆಗಾಗ ಊರಿಗೂ ಬರುತ್ತಾನೆ ಇಲ್ಲಿ ಒಳ್ಳೆಯ ಮನೆಯೊಂದನ್ನು ಕಟ್ಟಿಸಿದ್ದಾನೆ ಆತನ ಸಂಸಾರವೂ ಇಲ್ಲೇ ನೆಲೆಸಿದೆ. ಮಕ್ಕಳು ಇಂಗ್ಲಿಷ್ ಶಾಲೆಯಲ್ಲಿ ಕಲಿಯತ್ತಿದ್ದಾರೆ . ಹಲವಾರು ದೇಶ ಸುತ್ತಿರುವ ಈತ ಬಂದಾಗಲೆಲ್ಲ ಊರಿನ ಮಕ್ಕಳಿಗೆ ಇಂಗ್ಲಿಷ್ ಶಾಲೆಯಲ್ಲಿ ಓದಿ ಎಂದು ಸಲಹೆ ನೀಡುತ್ತಾನೆ. ಅವನ ಅನುಭವ ಸುಳ್ಳಲ್ಲ.

ನಮ್ಮ ತಾಲ್ಲೂಕಿನ ಹುಡುಗಿಯೊಬ್ಬಳು ಕಷ್ಟದಿಂದ ಕನ್ನಡ ಶಾಲೆಯಲ್ಲಿ ಕಲಿತು ಮುಂದೆ ಎಂ.ಎಸ್‌ಸಿ ಓದಿ ಇಲ್ಲೇ ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದಳು. ಇದೀಗ ಮದುವೆಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾಳೆ. ಬೆಂಗಳೂರಿನ ಯಾವ ಕಾಲೇಜಿನಲ್ಲೂ ಅವಳಿಗೆ ಕೆಲಸ ಸಿಗಲಿಲ್ಲ. ಕಾರಣ ಸಂದರ್ಶನಕ್ಕೆ ಹೋದಲ್ಲೆಲ್ಲ "ನೀನು ಪಾಠವೇನೋ ಮಾಡುತ್ತೀಯಾ ಆದರೆ ಮಾತನಾಡುವಾಗ ನಿನ್ನ ಇಂಗ್ಲಿಷ್ ಸರಿಯಾಗಿಲ್ಲ" ಎನ್ನುತ್ತಿದ್ದರಂತೆ. ಈಗ ಇಂಗ್ಲಿಷ್ ಕ್ಲಾಸಿಗೆ ಸೇರಿದ್ದಾಳೆ ಮತ್ತು ಊರಿಗೆ ಬಂದಾಗಲೆಲ್ಲ ಬೇರೆಯವರಿಗೆ ನಿಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗೇ ಕಳುಹಿಸಿ ಎನ್ನುತ್ತಾಳೆ.

ಪ್ರಾದೇಶಿಕ ಭಾಷೆಗಳು ಇದುವರೆಗೂ ಉಳಿದು ಬಂದಿರುವುದು ಹಳ್ಳಿಗಳಲ್ಲಿ ಅದೂ ಸ್ಥಿತಿವಂತರಲ್ಲದ ಕೆಳವರ್ಗದ ಜನರಿಂದ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವವರೂ ಅವರ ಮಕ್ಕಳೇ. (ಗ್ರಾಮೀಣ ಪ್ರದೇಶದ ಮೇಲ್ವರ್ಗದ-ಶ್ರೀಮಂತರ ಮನೆಗಳಲ್ಲಿ ಈಗಾಗಲೇ ಇಂಗ್ಲಿಷ್ ಆಡುಭಾಷೆಯಾಗಿಯೇ ಪ್ರವೇಶಿಸಿದೆ) ಪ್ರಪಂಚದ ಅನೇಕ ಮುಂದುವರೆದ ದೇಶಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣ ಇಲ್ಲ. ಹಾಗೇ ಹಲವು ದೇಶಗಳಲ್ಲಿ ಇಂಗ್ಲಿಷ್ ಇಲ್ಲವೇ ಇಲ್ಲ ಎಂದು ಯಾರೆಷ್ಟೇ ಹೇಳಿದರೂ ಸಾಮಾನ್ಯರಿಗೆ ಇಂಗ್ಲಿಷ್ ಇಂದು ಪ್ರಪಂಚದ ಹೆಬ್ಬಾಗಿಲಾಗಿಯೇ ಕಾಣುತ್ತಿದೆ. ಮತ್ತು ಆ ಮೂಲಕ ಒಳ್ಳೆಯ ಉದ್ಯೋಗಾವಕಾಶ ಮತ್ತು ಬದುಕಿನ ಕನಸನ್ನು ಕಾಣುತ್ತಿದ್ದಾರೆ. ಇಂಗ್ಲಿಷ್ ಕಲಿಯದಿದ್ದರೆ ನಾವು ಎರಡನೆ ದರ್ಜೆ ಪ್ರಜೆಗಳಾಗಿಯೇ ಉಳಿದುಬಿಡುತ್ತೇವೆನ್ನುವ ಭಯವೂ ಕೆಳವರ್ಗದ ಜನರಲ್ಲಿ ವ್ಯಾಪಕವಾಗಿದೆ.

ಆದರೆ ನಾವು ಅಸಾಮಾನ್ಯರೆಂದು ಹೇಳುವ ಅನೇಕರಲ್ಲೂ ಈ ರೀತಿಯ ಭಾವನೆ ಮತ್ತು ಸಾಮಾನ್ಯನ ಕನಸುಗಳಿವೆ. ಅವರಲ್ಲಿ ನೆಲ-ಜಲ-ಭಾಷೆಗಳಿಗೆ ಸಂಬಂಧಪಟ್ಟಂತೆ ಖಚಿತ ನಿಲುವು, ಸಿದ್ಧಾಂತ ಏನೇ ಇದ್ದರೂ ಸ್ವಂತದ ವಿಷಯಕ್ಕೆ ಬಂದಾಗ ಸಾಮಾನ್ಯನ ವಿವೇಕದ ಕಡೆಗೆ ವಾಲುತ್ತಾರೆ ಮತ್ತು ಪರಿಸ್ಥಿತಿಯೊಡನೆ ರಾಜಿ ಮಾಡಿಕೊಳ್ಳುತ್ತಾರೆ. ಆದ್ದರಿಂದಲೇ ನಾವು ಅನೇಕ ಬಾರಿ 'ಈ ಬುದ್ಧಿವಂತರು-ಹೋರಾಟಗಾರರು ನಮ್ಮ ಮಕ್ಕಳಿಗೆ ಮಾತ್ರ ಕನ್ನಡ ಶಾಲೆಯ ಉಪದೇಶಮಾಡಿ

ತಮ್ಮ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸುತ್ತಿದ್ದಾರೆ' ಎಂಬ ದೂರು ಕೇಳಿಬರುತ್ತದೆ ಈ ಎಲ್ಲ ಕಾರಣಗಳಿಂದಾಗಿ ಇಂದು ನಗರ– ಹಳ್ಳಿ ಎರಡೂ ಕಡೆಗಳಲ್ಲೂ ನಾನಾ ರೀತಿಯ ಇಂಗ್ಲಿಷ್ ಶಾಲೆಗಳು ಹುಟ್ಟಿಕೊಳ್ಳುತ್ತಿವೆ. ಇವುಗಳ ಗುಣಮಟ್ಟದಲ್ಲಿ ಕೂಡಾ ಅಪಾರ ವ್ಯತ್ಯಾಸಗಳಿವೆ. ಆದರೂ ಜನ ತಮ್ಮ ಅನುಕೂಲಕ್ಕೆ ತಕ್ಕಂತ ಇಂಗ್ಲಿಷ್ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಿದ್ದಾರೆ. ಇದರಿಂದ ಹಳೆಯ ತಾರತಮ್ಯದ ಸಮಾಜವೇ ಹೊಸ ವೇಷದಲ್ಲಿ ಮುಂದುವರಿಯುತ್ತಿದೆ.

ಇವುಗಳ ಮಧ್ಯೆ ಕನ್ನಡವೇ ಅಥವಾ ಮಾತೃಭಾಷೆಯೇ ಎಂಬ ವಿವಾದ ಹುಟ್ಟಿಕೊಂಡಿದೆ. ಭಾಷಾ ಅಲ್ಪಸಂಖ್ಯಾತರ ಹೆಸರಿರಲಿ ಇನ್ನೇನೇ ಇರಲಿ, ಎಲ್ಲ ಶಾಲೆಗಳಲ್ಲೂ ಭಾರತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿರುವುದು ಇಂಗ್ಲಿಷ್ ಭಾಷೆಯೇ. ಅನೇಕ ಉರ್ದು ಶಾಲೆಗಳೂ ಸಹ ಸರ್ಕಾರಿ ಕನ್ನಡ ಶಾಲೆಗಳಂತೆ ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚುವ ಸ್ಥಿತಿಗೆ ಬಂದಿವೆ.

ನನಗೆ ಪರಿಚಯದರೊಬ್ಬರ ಮಗ ಇತ್ತೀಚೆಗೆ ಚೆನ್ನೈನ ಸಾಫ್ಟ್ ವೇರ್ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿದ. ಅತ್ಯಲ್ಪ ಕಾಲದಲ್ಲೇ ಭಡ್ತಿಯನ್ನೂ ಪಡೆದ. ಅವನ ಮೇಲಧಿಕಾರಿಯೊಬ್ಬರು (ಅವರು ತಮಿಳರು) ಅವನನ್ನು ಕರೆದು 'ನಿನ್ನ ಬಗ್ಗೆ ನನಗೆ ತುಂಬಾಹೆಮ್ಮೆ, ನೀನು ಇಲ್ಲಿ ಎಲ್ಲರೊಡನೆ ಬೆರೆತು ಖುಷಿಯಾಗಿ ಕೆಲಸ ಮಾಡಬೇಕು. ಅದಕ್ಕಾಗಿ ಇಲ್ಲಿನ ಭಾಷೆ ನಿನಗೆ ಅರ್ಥವಾಗಬೇಕು, ಜೋಕುಗಳಿಗೆ ನಗಬೇಕು, ಇತರರು ನಿನ್ನ ಬಗ್ಗೆ ಆಡಿದ ಮಾತು ನಿನಗೆ ತಿಳಿಯಬೇಕು, ಆದ್ದರಿಂದ ನೀನು ತಮಿಳು ಕಲಿಯಬೇಕು. ಇಂದಿನಿಂದ ನಾನು ನಿನ್ನೊಡನೆ ತಮಿಳಿನಲ್ಲಿ ಮಾತ್ರ ಮಾತನಾಡುತ್ತೇನೆ' ಎಂದು ಹೇಳಿ ಅದರಂತೆ ನಡೆದು, ಮೂರು ತಿಂಗಳಲ್ಲಿ ಆತ ತಮಿಳಿನಲ್ಲಿ ಮಾತನಾಡುವಂತೆ ಮಾಡಿದ್ದಾರೆ.

ಎಲ್ಲಿ ನಮ್ಮ ದಿನ ನಿತ್ಯದ ಬದುಕಿಗೆ ಯಾವ ಭಾಷೆ ಅನಿವಾರ್ಯವೋ ಆ ಭಾಷೆಯನ್ನು ಜನರು ಸ್ವೀಕರಿಸುತ್ತಾರೆ. ಇದಕ್ಕೆ ಉದಾಹರಣೆಯೆಂದರೆ. ಇತ್ತೀಚೆಗೆ ಕಾಫಿ ತೋಟಗಳಿಗೆ ಕೆಲಸಕ್ಕಾಗಿ ಬರುತ್ತಿರುವ ಅಸ್ಸಾಮಿಗಳೆಂದುಕೊಳ್ಳುತ್ತಿರುವ ಕೃಷಿ ಕಾರ್ಮಿಕರು, ಬಂದು ವರ್ಷವಾಗುವಷ್ಟರಲ್ಲೇ ಇವರಲ್ಲಿ ಸಾಕಷ್ಟು ಮಂದಿ ಕನ್ನಡದಲ್ಲಿ ವ್ಯವಹರಿಸುವಷ್ಟು ಕಲಿತಿದ್ದಾರೆ. ಬ್ಯಾಂಕುಗಳಲ್ಲಿರುವ ಉತ್ತರ ಭಾರತೀಯರೂ ಇಲ್ಲಿ ಬಂದು ಸಾಕಷ್ಟು ಕನ್ನಡ ಕಲಿತಿದ್ದಾರೆ. ಆದರೆ ತಲೆಮಾರುಗಳಿಂದ ಇಲ್ಲೇ ನೆಲಸಿದ್ದ ತಮಿಳು ಕಾರ್ಮಿಕರು ಇತ್ತೀಚೆಗಷ್ಟೇ ಕನ್ನಡ ಮಾತನಾಡುತ್ತಿದ್ದಾರೆ. ಈ ಬದಲಾವಣೆಗೆ ತಮಿಳರಲ್ಲ, ಕೆಲಮಟ್ಟಿಗೆ ಬದಲಾದ ಕನ್ನಡಿಗರ ಮನೋಭಾವವೂ ಕಾರಣ. ಆದರೆ ಈ ಮೇಲಿನ ಎರಡು ಸಂದರ್ಭದ ನಡವಳಿಕೆಗಳಿಂದ ಇಂಗ್ಲಿಷಿನ ವಿರುದ್ಧ ತಮಿಳಿಗಾಗಲೀ ಕನ್ನಡಕ್ಕಾಗಲೀ ಬಹಳ ದೊಡ್ಡ ಲಾಭವೇನೂ ಆಗಲಾರದು.

ಎ ಲ್ಲಿಯವರೆಗೆ ಯಾವುದೇ ಭಾಷೆ ಜನಪದರ ಅನ್ನ ಮತ್ತು ಅಭಿವ್ಯಕ್ತಿ ಎರಡರ

ಭಾಷೆಯೂ ಆದಾಗ ಮಾತ್ರ ಅದು ಉಳಿದು ಬೆಳೆಯಬಲ್ಲದು. ಅನೇಕ ವರ್ಷಗಳ ಹಿಂದೆಯೇ ಲಂಕೇಶರು "ಆಧುನಿಕ ಸಮಸ್ಯೆಗಳನ್ನು, ಪ್ರಜ್ಞೆಯನ್ನು ಹೇಳಲಾಗದಿದ್ದರೆ ಕನ್ನಡ ಕೂಡಾ ಬೇಡವಾಗುತ್ತದೆ" ಎಂದದ್ದು ಈ ಅರ್ಥದಲ್ಲಿಯೇ.

ಈ ಎಲ್ಲ ವಿಚಾರಗಳನ್ನೂ ಗಮನಿಸಿ ನಮ್ಮ ಭಾಷೆಗಳನ್ನು ಉಳಿಸಿಕೊಳ್ಳಬೇಕಾದ ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸರ್ಕಾರವಾಗಲೀ ಕನ್ನಡ ಸಾಹಿತ್ಯ ಪರಿಷತ್ತಾಗಲೀ ಏನು ಮಾಡಬಹುದೆಂಬ ವಿಚಾರಕ್ಕೆ ಬರೋಣ. ಯಾವುದೇ ಸರ್ಕಾರವಾಗಲೀ ಜನರಿಂದ ಬಲವಾದ ಒತ್ತಡ ಬಾರದೆ ಯಾವ ಕೆಲಸವನ್ನೂ ಮಾಡಲಾರದು. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲವೇ ಅನಿವಾರ್ಯವಾದ್ದರಿಂದ ಮತ್ತು ಆಕಾರಣಕ್ಕಾಗಿಯೇ ಹೆಚ್ಚಿನ ಎಲ್ಲಾ ರಾಜಕಾರಣಿಗಳೂ ಎಲ್ಲವನ್ನೂ ಓಟಿನ ಸಂಖ್ಯೆಗಳಾಗಿ ನೋಡುವುದರಿಂದ ಬಲವಾದ ಚಳುವಳಿಯ ರೂಪದ ಸಂಘಟನೆಗಳ ಮೂಲಕ– ಆಂದೋಲನಗಳ ಮೂಲಕ ಜನಾಭಿಪ್ರಾಯ ರೂಪಿಸುವ ಕೆಲಸವನ್ನು ಮಾಡಬೇಕಾಗಿದೆ.

ಆದರೆ ಆ ರೀತಿಯ ಸಂಚಲನವನ್ನು ಉಂಟುಮಾಡಬಲ್ಲ ವ್ಯಕ್ತಿಗಳ ಬಗೆಗೇ ಜನ ಇಂದು ನಂಬಿಕೆ ಕಳೆದುಕೊಂಡಿದ್ದಾರೆ. ದೇವನೂರು ಮಹಾದೇವರಂತೆ, ಸುಂದರಲಾಲ್ ಬಹುಗುಣರಂತೆ, ಆದಷ್ಟೂ ನಡೆ–ನುಡಿಗೆ ಹತ್ತಿರವಾಗಿ ಬದುಕುತ್ತಿರುವವರು ಅನೇಕರು ಇಂದೂ ಇದ್ದಾರೆ. ಆದರೆ ವೈಯಕ್ತಿಕ ಪ್ರಯತ್ನಗಳು ಒಂದು ರೀತಿಯ ಸರ್ವಾಧಿಕಾರಿ ನಡೆಯತ್ತ ಚಲಿಸಬಲ್ಲುದೆಂಬ ಅರಿವೇ ಇಂದು ದೇವನೂರು ಮಹಾದೇವರಂತವರನ್ನು ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗೆ, ಒಂದು ರೀತಿಯ 'ಶಾಕ್ ಟ್ರೀಟ್‌ಮೆಂಟ್' ನೀಡುವುದಕ್ಕೆ ಪ್ರೇರೇಪಿಸಿರಬೇಕು. ಆ ಕಾರಣಕ್ಕಾಗಿಯೇ ಅವರು "ಕನ್ನಡ ಸಾಹಿತ್ಯ ಪರಿಷತ್ತು ಪೊರೆ ಕಳಚಿ ನಿಲ್ಲಲಿ, ನಾನೂ ನಿಮ್ಮೊಡನಿರುವೆ" ಎಂದಿದ್ದಾರೆ ಎನಿಸುತ್ತದೆ.

ಇದನ್ನೇ ಇನ್ನೊಂದು ರೀತಿಯಲಿ ಹೇಳುವುದಾದರೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರಾರಂಭವಾದದ್ದೇ "ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ" ಎಂಬ ಘೋಷವಾಕ್ಯದೊಡನೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಾಂಸ್ಥಿಕ ರಚನೆಯೂ ಅದಕ್ಕೆ ಅನುಗುಣವಾಗಿ ಪ್ರಜಾಸತ್ತಾತ್ಮಕವಾಗಿ ಇದೆ. ಆದರೆ ಸಾಹಿತ್ಯ ಪರಿಷತ್ತಿನ ಹೆಸರಿನಲ್ಲಿರುವ "ಸಾಹಿತ್ಯ" ಎಂಬುದನ್ನು 'ವಾಙ್ಮಯ ಸಾಹಿತ್ಯ' ಎಂಬುದಕ್ಕೆ ಸೀಮಿತಗೊಳಿಸಿಕೊಂಡದ್ದರಿಂದಲೇ, ಇಂದು ಅನೇಕ ಗೊಂದಲಗಳಿಗೆ ಕಾರಣವಾಗಿದೆ ಎನಿಸುತ್ತದೆ. ಸಾಹಿತ್ಯ ಅಕಾಡೆಮಿ ಮಾಡಬಲ್ಲಂತ ಅನೇಕ ಕೆಲಸಗಳನ್ನು ತಾನೂ ಮಾಡುತ್ತಿದ್ದು ನಿಜವಾದ ಕನ್ನಡದ ಕೆಲಸವನ್ನು ಮಾಡಬೇಕಿದ್ದ ಈ ಸಂಸ್ಥೆ ಹೆಚ್ಚಾಗಿ ಭಾವನಾತ್ಮಕ ಕೆಲಸಗಳಲ್ಲಿ ತೊಡಗಿಕೊಂಡಿದೆ. ಇದರಿಂದಲೇ ವಿಜ್ಞಾನ ಪರಿಷತ್ತು, ರಂಗಭೂಮಿ ಪರಿಷತ್ತು ಇತ್ಯಾದಿ ಹೆಸರುಗಳೂ ಇತ್ತೀಚೆಗೆ ಕೇಳಿಬರುತ್ತಿದೆ. ಕನ್ನಡ

ಸಾಹಿತ್ಯ ಪರಿಷತ್ತು ಈಗಲಾದರೂ ತನ್ನ ಮೂಲ ಉದ್ದೇಶಕ್ಕೆ ಮರಳಿ ಕನ್ನಡದ ಸಮಗ್ರತೆಯನ್ನು ಕನ್ನಡ ನೆಲದ ಜನರ ಬದುಕಿಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವ ಸಂಸ್ಥೆಯಾಗಬೇಕಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿಗೆ ಅದರ ಸಾಂಸ್ಥಿಕ ನಿಯಮದಂತೆ, ಕನ್ನಡ ಬಲ್ಲ ಅಂದರೆ ಕನ್ನಡದಲ್ಲಿ ಮಾತಾಡಬಲ್ಲ, ವ್ಯವಹರಿಸಬಲ್ಲ ಯಾರು ಬೇಕಾದರೂ ಅದರ ಸದಸ್ಯರಾಗಬಹುದು. ಅಂದರೆ ಇದು ಕೇವಲ ಸಾಹಿತಿಗಳ, ಕಲಾವಿದರ ಸಂಸ್ಥೆ ಅಲ್ಲ, ಸಮಸ್ತ ಕನ್ನಡಿಗರ ಸಂಸ್ಥೆ. (ಮನೆಮಾತು ಬೇರೆ ಯಾವುದಿದ್ದರೂ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಲು ಯಾವ ಅಡ್ಡಿಯೂ ಇಲ್ಲ, ಸಾವಿರಾರು ಜನರು ಸದಸ್ಯರಾಗಿ ಇದ್ದಾರೆ) ಇದರ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಘಟಕಗಳ ಅಧ್ಯಕ್ಷರು ನೇರವಾಗಿ ಜನರಿಂದ ಚುನಾಯಿತರಾಗಿರುತ್ತಾರೆ. ಒಂದುವೇಳೆ ಕನ್ನಡದ ನೆಲದ ಶೇ. ೪೦ ರಷ್ಟು ಜನ ಇದರ ಸದಸ್ಯರಾಗಿದ್ದರೆ ಹಾಗೂ ಇದರ ಚುನಾಯಿತ ಪದಾಧಿಕಾರಿಗಳು ಸರ್ಕಾರಕ್ಕೆ ಸಲಹೆ ನೀಡುವಷ್ಟು ಮತ್ತು ಅದನ್ನು ಅನುಷ್ಠಾನಗೊಳಿಸುವಂತೆ ಒತ್ತಡ ತರುವಷ್ಟು ಶಕ್ತರಾದರೆ ಏನಾದರೂ ಕೆಲಸ ಆಗಬಹುದು. ಸಮಾನ ಶಿಕ್ಷಣ ವ್ಯವಸ್ಥೆಯ ಜೊತೆಗೆ, ಕನ್ನಡ ಭಾಷೆಯ ಮೂಲಕವೇ ಉದ್ಯೋಗ ಸೃಷ್ಟಿ ಮಾಡಬಲ್ಲಂತ ವಾತಾವರಣ ನಿರ್ಮಾಣವಾದರೆ ಆಗ ಕನ್ನಡ ಜನರಿಗೆ ಅಗತ್ಯದ ಭಾಷೆಯಾಗುತ್ತದೆ, ಅನಿವಾರ್ಯವಾಗುತ್ತದೆ.

ಈಗ ಸಧ್ಯದ ಪರಿಸ್ಥಿತಿಯಲ್ಲಿ ಕನ್ನಡದ (ಪ್ರಾದೇಶಿಕ ಭಾಷೆಗಳ) ಸಾಂಸ್ಕೃತಿಕ ಲೋಕ ಮಾತ್ರ ಕನ್ನಡವನ್ನೇ(ಪ್ರಾದೇಶಿಕ ಭಾಷೆಗಳನ್ನೇ)ಹಿಡಿದುಕೊಂಡಿದೆ. (ಇಲ್ಲೂ ಕೂಡಾ ಕೆಲವು ಪ್ರಾದೇಶಿಕ ಭಾಷೆಗಳ ಮೇಲೆ, ರಾಷ್ಟ್ರೀಯತೆ- ರಾಷ್ಟ್ರಭಾಷೆಯ ಹೆಸರಿನಲ್ಲಿ ಹಿಂದಿಯ ಹೇರಿಕೆಯೂ ನಡೆಯುತ್ತಿದೆ. ಇದಕ್ಕೆ ಉದಾಹರಣೆಯೆಂದರೆ ರಾಷ್ಟ್ರೀಯ ನಾಟಕ ಶಾಲೆಗೆ ಪ್ರವೇಶ ಪಡೆಯುಲು ಹಿಂದಿಜ್ಞಾನವನ್ನು ಕಡ್ಡಾಯಗೊಳಿಸಿರುವುದು). ಇದಕ್ಕೆ ಕಾರಣ ನಮ್ಮ ಅದು ನಮ್ಮ ಅಭಿವ್ಯಕ್ತಿಯ ಅತ್ಯಂತ ಸಹಜ ಸಾಧನವೆಂಬುದಷ್ಟೇ ಅಲ್ಲ, ಅದಕ್ಕೆ ಸಂಬಂಧಪಟ್ಟ ಎಲ್ಲ ಜ್ಞಾನವೂ ಆ ಭಾಷೆಗಳಲ್ಲಿರುವದು.

ಇದರೊಂದಿಗೆ ನಮ್ಮ ಕೃಷಿ ಮತ್ತು ಇನ್ನೂ ಉಳಿದಿರುವ ಕೃಷಿಸಂಬಂಧಿ ಕಸುಬುಗಳಾದ ಕಮ್ಮಾರಿಕೆ, ಬಡಗಿ, ಇತ್ಯಾದಿಗಳು, ಮತ್ತು ನೇಕಾರಿಕೆ, ಕುಂಭಕಲೆ, ಶಿಲ್ಪಕಲೆ, ಮುಂತಾದ ನಮ್ಮ ಅನೇಕ ಪಾರಂಪರಿಕ ವಿದ್ಯೆಗಳು. ನಾಟಿ ಮತ್ತು ಆಯುರ್ವೇದ ವೈದ್ಯ ಪದ್ಧತಿಗಳು. ಇವುಗಳ ಜ್ಞಾನವೆಲ್ಲ ಹೆಚ್ಚಾಗಿ ಅವರವರ ಮನೆಮಾತು ಮತ್ತು ಪರಿಸರದ ಭಾಷೆಗಳಲ್ಲಿ ಇದೆ. ಅವರ ಪಾರಂಪರಿಕ ಜ್ಞಾನದ ಭಾಷೆಯ ಮೂಲಕ ಈ ವಿದ್ಯೆಯನ್ನವರು ಮುಂದಿನ ಪೀಳಿಗೆಗೆ ದಾಟಿಸುತ್ತಾ ಬಂದಿದ್ದಾರೆ. ಅವರು ಅದರ ಮೂಲಕವೇ ಅನ್ನ ಗಳಿಸುತ್ತ ವ್ಯವಹಾರಕ್ಕೆ ತಕ್ಕಷ್ಟು

ರಾಜ್ಯ ಭಾಷೆಯ ಜ್ಞಾನವನ್ನು ಪಡೆದಿದ್ದಾರೆ. ಆದ್ದರಿಂದ ನಮ್ಮ ಯಾವುದೇ ಪ್ರಾದೇಶಿಕ ಭಾಷೆಯೂ ಜನರಿಗೆ ಬದುಕಿಗೆ ನೆಮ್ಮದಿ ತರುವಷ್ಟು ಶಕ್ತವಾಗುವಂತೆ ಮಾಡುತ್ತಲೇ ವ್ಯವಹಾರ ಸಂಪರ್ಕಕ್ಕೆ ಬೇಕಾಗುವಷ್ಟು ಇಂಗ್ಲಿಷನ್ನೋ ಇನ್ನಾವುದೇ ಭಾಷೆಯನ್ನು ಚೆನ್ನಾಗಿ ಕಲಿಯುವದು ಕಷ್ಟವಲ್ಲ. ಅದಕ್ಕಾಗಿ ಆ ಭಾಷೆಯ ಮಾಧ್ಯಮದಲ್ಲೇ ಕಲಿಯುವ ಅಗತ್ಯವೂ ಇಲ್ಲ. ಈ ವಿಚಾರ ಜನರಿಗೆ ಮನದಟ್ಟಾಗುವಂತಹ, ಅದರಲ್ಲಿ ನಂಬಿಕೆ ಬರುವಂತಹ ಕೆಲಸವನ್ನು ವ್ಯಾಪಕವಾಗಿ ಮಾಡದೆ, ವೇದಿಕೆಗಳಲ್ಲಿ, ಮಾಧ್ಯಮಗಳಲ್ಲಿ ಹೇಳುತ್ತ-ಚರ್ಚಿಸುತ್ತಾ ಕುಳಿತರೆ ಪ್ರಯೋಜನವಾಗಲಾರದು.

ಇದರಿಂದಲೇ ನಮ್ಮ ಬದುಕಿನ ಎಲ್ಲಾ ವಿಭಾಗಗಳ ಅಂದರೆ ಸಾಹಿತ್ಯ ಕಲೆಗಳ ಜೊತೆಯಲ್ಲಿ ವಿಜ್ಞಾನ, ಗಣಿತ, ಲೆಕ್ಕ ಪತ್ರಗಳ ವ್ಯವಹಾರಗಳು, ತಂತ್ರಜ್ಞಾನ, ಕೃಷಿ, ವೈದ್ಯಕೀಯ ಸಂಬಂಧಿತ ಎಲ್ಲ ತಿಳುವಳಿಕೆಯನ್ನು ಕನ್ನಡದಲ್ಲಿ ದೊರಕಿಸಿಕೊಡುವ ಕೆಲಸವನ್ನು ಸಾಹಿತ್ಯ ಪರಿಷತ್ತು ಸರ್ಕಾರದ ಮೂಲಕ ಮಾಡಿಸುವ ಕೆಲಸಕ್ಕೆ ತೊಡಗಿಕೊಳ್ಳಬೇಕು. ಪರಿಷತ್ತಿಗೆ ಸಮ್ಮೇಳನ, ಜಾತ್ರೆ, ಉತ್ಸವಗಳು, ಗೋಷ್ಠಿಗಳಿಗಿಂತ ಈ ಕೆಲಸಗಳು ಪ್ರಥಮ ಆದ್ಯತೆಯದ್ದಾಗಬೇಕು.

ನಮಗೆ ಇಂಗ್ಲಿಷಿನ ಮೂಲಕ ಮಾತ್ರ ಬರಬಹುದಾದ ಜ್ಞಾನದಲ್ಲಿ ಸಾಕಷ್ಟನ್ನು ಕೇವಲ ಪ್ರಾದೇಶಿಕ ಭಾಷೆಗೆ ತರ್ಜುಮೆ ಮತ್ತು ಡಬ್ಬಿಂಗ್ ಮೂಲಕ ಪಡೆಯಬಹುದಾಗಿದೆ. ಟಿ.ವಿ. ಮತ್ತು ವಿದ್ಯುನ್ಮಾನ ಮಾಧ್ಯಮದಲ್ಲಿ ಇದಕ್ಕೆ ವಿಪುಲ ಅವಕಾಶಗಳಿವೆ. ವಿಷಾದದ ಸಂಗತಿಯೆಂದರೆ ಕೃಷಿಯಲ್ಲಿ ನಮ್ಮ ಪಾರಂಪರಿಕ ಮತ್ತು ಆಧುನಿಕ ಜ್ಞಾನಗಳೆರಡೂ ಸಾಕಷ್ಟಿದ್ದರೂ ಕೃಷಿ ವಿದ್ಯಾಲಯಗಳೂ ಇಂಗ್ಲಿಷಿನಲ್ಲಿ ಬೋಧಿಸುತ್ತಿರುವುದು.

ಇಂಗ್ಲಿಷಿನ ಅಥವಾ ಇನ್ನಾವುದೇ ಭಾಷೆಯನ್ನು ಅಗತ್ಯವಿದ್ದಷ್ಟು ಕಲಿಯತ್ತಲೇ ಕನ್ನಡವನ್ನು ನಮ್ಮ ಸಹಜ ಅಭಿವ್ಯಕ್ತಿ ಮತ್ತು ಅನ್ನಗಳಿಕೆಯ ಭಾಷೆಯನ್ನಾಗಿಸಿ, ಅದರಿಂದ ಬರುವ ಜ್ಞಾನದಮೂಲಕ ಕಟ್ಟದಬಹುದಾದ ಬದುಕಿನ ವೈವಿಧ್ಯಗಳು ಎಲ್ಲರಿಗೂ ಸಮಾನವಾಗಿ ಸಿಗುವಂತೆ ಮಾಡಲು. ಅದಕ್ಕಾಗಿ ನ್ಯಾಯಾಲಯದ ಯಾವುದೇ ಆದೇಶಕ್ಕೆ ವಿರುದ್ಧವಾಗದಂತೆ ಕಾರ್ಯಕ್ರಮ ರೂಪಿಸಲು ಪ್ರಜಾಪ್ರಭುತ್ವದಲ್ಲಿ ಯಾವುದೇ ಚುನಾಯಿತ ಸರ್ಕಾರಕ್ಕೆ ಸಾಧ್ಯವಿದೆ. ಸರ್ಕಾರವನ್ನು ಎಚ್ಚರಿಸುವ, ತಿದ್ದುವ, ಜನರತ್ತ ನೋಡುವಂತೆ ಮಾಡುವ ಕೆಲಸವನ್ನು, ಕನ್ನಡ ಸಾಹಿತ್ಯ ಪರಿಷತ್ತಾಗಲೀ ಇನ್ನಾವುದೇ ಪ್ರಜಾಸತ್ತಾತ್ಮಕ ಸಂಸ್ಥೆ ಮಾಡಲಿ ಅದರೊಂದಿಗೆ ಸೇರಿ ಕೆಲಸ ಮಾಡತೊಡಗುವುದನ್ನು ಬಿಟ್ಟು ದೇವನೂರರ ಸಾತ್ವಿಕ ಸಿಟ್ಟಿಗಾಗಲೀ, ನಮ್ಮಂತವರ ತುಡಿತಕ್ಕಾಗಲೀ ಸಧ್ಯಕ್ಕೆ ಅನ್ಯಮಾರ್ಗವಿಲ್ಲವೆನಿಸುತ್ತದೆ.

# ಚರ್ಚೆಯಿಲ್ಲದ ಕಾನೂನುಗಳ ಜಾರಿಯಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ

ಅನು : ಬಿ.ಎನ್.ಗುರುಮೂರ್ತಿ ಮೂಲ : ಪ್ರಣಬ್ ಮುಖರ್ಜಿ

(೨೦೧೫ ರ ಗಣರಾಜ್ಯ ದಿನದ ಮುನ್ನಾ ದಿನ ಭಾರತದ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪೂರ್ತ ಭಾಷಣದ ಕನ್ನಡಾನುವಾದ.)

ನನ್ನ ಸಹ ಪ್ರಜೆಗಳೇ,

೧) ೬೬ನೆಯ ಗಣರಾಜ್ಯ ದಿನದ ಮುನ್ನಾ ದಿನ ಭಾರತದಲ್ಲಿ ಹಾಗೂ ವಿದೇಶಗಳಲ್ಲಿರುವ ನಿಮ್ಮೆಲ್ಲರಿಗೂ ನನ್ನ ಆತ್ಮೀಯ ಅಭಿನಂದನೆಗಳು. ನಮ್ಮ ಸಶಸ್ತ್ರ ಪಡೆಗಳು, ಅರೆಮಿಲಿಟರಿ ಪಡೆಗಳು ಮತ್ತು ಆಂತರಿಕ ಭದ್ರತಾ ಪಡೆಗಳ ಸದಸ್ಯರಿಗೆ ನನ್ನ ವಿಶೇಷ ಅಬಿನಂದನೆಗಳು.

೨) ಜನವರಿ ೨೬ನೆಯ ತಾರೀಖು ನಮ್ಮ ರಾಷ್ಟ್ರೀಯ ಸ್ಮರಣೆಯಲ್ಲಿ ಶಾಶ್ವತ ಸ್ಥಾನ ಹೊಂದಿದೆ. ಏಕೆಂದರೆ ಆಧುನಿಕ ಭಾರತ ಜನಿಸಿದ ದಿನ ಅದು. ಮಹಾತ್ಮ ಗಾಂಧಿ ಅವರ ನೈತಿಕ ಮತ್ತು ರಾಜಕೀಯ ನಾಯಕತ್ವದಡಿ, ೧೯೨೯ರ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷ್‌ರಿಂದ ಸಂಪೂರ್ಣ ಸ್ವಾತಂತ್ರ್ಯವನ್ನು ಒತ್ತಾಯಿಸುವ ಪೂರ್ಣ ಸ್ವರಾಜ್ ನಿರ್ಣಯವನ್ನು ಅಂಗೀಕರಿಸಿತು. ಗಾಂಧೀಜಿಯವರು ೧೯೩೦ರ ಜನವರಿ ೨೬ರಂದು ಆ ದಿನವನ್ನು ಸ್ವಾತಂತ್ರ್ಯ ದಿನವಾಗಿ ಆಚರಿಸಲು ದೇಶದೆಲ್ಲೆಡೆ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಪ್ರತಿ ವರ್ಷದ ಆ ದಿನ ಸ್ವಾತಂತ್ರ್ಯವನ್ನು ಗಳಿಸುವವರೆಗೆ ಸ್ವಾತಂತ್ರ್ಯ ಹೋರಾಟ ನಡೆಸುವ ಶಪಥವನ್ನು ದೇಶ ಕೈಗೊಂಡಿತು.

೩) ಸರಿಯಾಗಿ ೨೦ ವರ್ಷಗಳ ನಂತರ, ೧೯೫೦ರಲ್ಲಿ ನಮ್ಮ ಆಧುನಿಕತೆಯ ಪ್ರಣಾಳಿಕೆಯಾದ ಸಂವಿಧಾನವನ್ನು ನಾವು ಅಳವಡಿಸಿಕೊಂಡವು, ಅದಕ್ಕೆ ಎರಡು ವರ್ಷಗಳ ಮುನ್ನ ಗಾಂಧೀಜಿ ಹುತಾತ್ಮರಾಗಿದ್ದು ದುರ್ದೈವ ಆದರೂ, ಇಂದಿನ ಜಗತ್ತಿಗೆ ಭಾರತವನ್ನು ಒಂದು ಆದರ್ಶ ಮಾದರಿಯನ್ನಾಗಿ ಮಾಡಿರುವ ಸಂವಿಧಾನದ ಚೌಕಟ್ಟನ್ನು ಅವರ ಸಿದ್ಧಾಂತದ ತಳಹದಿಯಿಂದ ರಚಿಸಲಾಗಿತ್ತು. ಪ್ರಜಾಪ್ರಭುತ್ವ, ಮತಧರ್ಮದ ಸ್ವಾತಂತ್ರ್ಯ, ಲಿಂಗ ಸಮಾನತೆ ಮತ್ತು ದಟ್ಟ ದಾರಿದ್ರ್ಯದ ಬಲೆಯಲ್ಲಿ ಸಿಕ್ಕಿದ್ದವರಿಗೆ ಆರ್ಥಿಕ ಏಳಿಗೆ- ಈ ನಾಲ್ಕು ತತ್ವಗಳಲ್ಲಿ ಅದರ ತಿರುಳು ಅಡಗಿತ್ತು. ಇವುಗಳನ್ನು ಸಾಂವಿಧಾನಿಕ

ಹೊಣೆಗಳನ್ನಾಗಿ ಮಾಡಲಾಯಿತು. ದೇಶವನ್ನು ಆಳುವವರಿಗೆ ಗಾಂಧೀಜಿಯವರ ಶ್ರೀರಕ್ಷೆ ಸರಳವೂ, ಶಕ್ತಿಯುತವೂ ಆಗಿತ್ತು. ನಾನು ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ. "ಏನು ಮಾಡಬೇಕೆಂಬ ಬಗ್ಗೆ ನಿಮ್ಮಲ್ಲಿ ಅನುಮಾನ ಮೂಡಿದಾಗಲೆಲ್ಲಾ.....ನೀವು ನೋಡಿರಬಹುದಾದ ಅತ್ಯಂತ ಬಡ ಮತ್ತು ದುರ್ಬಲ ಮನುಷ್ಯನ ಮುಖವನ್ನು ನೆನಪು ಮಾಡಿಕೊಳ್ಳಿ... ನಿಮ್ಮ ಉದ್ದೇಶಿತ ಕಾರ್ಯದಿಂದ ಹಸಿದ ಹಾಗೂ ಆಧ್ಯಾತ್ಮಿಕವಾಗಿ ಹಸಿದಿರುವ ಕೋಟ್ಯಾಂತರ ಜನರಿಗೆ ಸ್ವರಾಜ್ಯ ಲಭಿಸುವುದಕ್ಕೆ ದಾರಿಯಾಗುತ್ತದೆಯೇ ಎಂದು ಪ್ರಶ್ನಿಸಿಕೊಳ್ಳಿ". ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿಯ ಮೂಲಕ ದಾರಿದ್ರ್ಯ ನಿವಾರಿಸುವ ನಮ್ಮ ದೃಢ ನಿಶ್ಚಯ ಆ ದಿಶೆಯಲ್ಲಿ ಒಂದು ಹೆಜ್ಜೆಯಾಗಬೇಕು.

೪) ಸಹ ಪ್ರಜೆಗಳೇ,

ಕಳೆದ ವರ್ಷ ಅನೇಕ ದೃಷ್ಟಿಗಳಿಂದ ಗಮನಾರ್ಹವಾಗಿತ್ತು. ವಿಶೇಷವಾಗಿ ಮೂರು ದಶಕಗಳ ನಂತರ ಜನತೆ ಸ್ಥಿರ ಸರ್ಕಾರಕ್ಕಾಗಿ ಒಂದೇ ಪಕ್ಷಕ್ಕೆ ಬಹುಮತ ನೀಡಿ ಚುನಾಯಿಸಿದ್ದಾರೆ ಹಾಗೂ ಈ ಪ್ರಕ್ರಿಯೆಯಲ್ಲಿ ದೇಶದ ಆಳ್ವಿಕೆಯನ್ನು ಸಮ್ಮಿಶ್ರ ಸರ್ಕಾರಗಳ ರಾಜಕೀಯದ ಒತ್ತಡಗಳಿಂದ ಮುಕ್ತಗೊಳಿಸಿದ್ದಾರೆ. ತನಗಿರುವ ಬಹುಮತವನ್ನು ನೀತಿಗಳ ರಚನೆಗೆ ಬಳಸಿಕೊಂಡು ಹಾಗೂ ಅವುಗಳ ಅನುಷ್ಠಾನಕ್ಕೆ ಕಾನೂನುಗಳನ್ನು ರಚಿಸುವ ಮೂಲಕ ಜನತೆಗೆ ನೀಡಿರುವ ತನ್ನ ಬದ್ಧತೆಯನ್ನು ಈಡೇರಿಸಲು ಚುನಾವಣಾ ಫಲಿತಾಂಶ ಚುನಾಯಿತ ಸರ್ಕಾರಕ್ಕೆ ಜನಾದೇಶ ನೀಡಿದೆ. ಮತದಾರರು ತಮ್ಮ ಪಾತ್ರ ನಿರ್ವಹಿಸಿದ್ದಾರೆ. ಈ ವಿಶ್ವಾಸವನ್ನು ಗೌರವಿಸುವುದು ಈಗ ಚುನಾಯಿತರಾದವರಿಗೆ ಸೇರಿದ ವಿಚಾರ. ಸ್ವಚ್ಛ, ದಕ್ಷ, ಲಿಂಗ-ಸಂವೇದಿ, ಪಾರದರ್ಶಕ, ಹೊಣೆಗಾರಿಕೆಯ ಮತ್ತು ಪ್ರಜಾಸ್ನೇಹಿ ಆಳ್ವಿಕೆಗೆ ನೀಡಿರುವ ಮತ ಇದು.

೫) ಸಹ ಪ್ರಜೆಗಳೇ,

ಕಾರ್ಯನಿರತ ಶಾಸಕಾಂಗವಿಲ್ಲದೆ ಯಾವುದೇ ಆಳ್ವಿಕೆ ಸಾಧ್ಯವಿಲ್ಲ. ಶಾಸಕಾಂಗ ಜನರ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. ಅದು ಜನತೆಯ ಆಶೋತ್ತರಗಳನ್ನು ಈಡೇರಿಸಲು ನಾಗರಿಕ ಸಂವಾದದ ಮೂಲಕ ಪ್ರಗತಿಪರ ಶಾಸನಗಳು ಜನರಿಗೆ ಸೌಲಭ್ಯ ತಲುಪಿಸುವ ವ್ಯವಸ್ಥೆಯನ್ನು ಸೃಷ್ಟಿಸುವ ವೇದಿಕೆ ಬಾಧ್ಯಸ್ಥರಲ್ಲಿನ ಭಿನ್ನಾಭಿಪ್ರಾಯಗಳ ನಿವಾರಣೆ ಹಾಗೂ ಜಾರಿಗೆ ತರಬೇಕಾದ ಕಾಯಿದೆ ಕುರಿತು ಒಮ್ಮತ ಮೂಡಿಸುವ ಅಗತ್ಯವನ್ನು ಇದು ಕೋರುತ್ತದೆ. ಚರ್ಚೆಯಿಲ್ಲದೆ ಕಾನೂನುಗಳನ್ನು ಜಾರಿಗೆ ತರುವುದರಿಂದ ಕಾನೂನು ರಚಿಸುವ ಸಂಸತ್ತಿನ ಪಾತ್ರಕ್ಕೆ ಬಾಧಕವಾಗುತ್ತದೆ. ಅದರಿಂದ ಜನತೆ ಸಂಸತ್ತಿನಲ್ಲಿಟ್ಟಿರುವ ವಿಶ್ವಾಸಕ್ಕೆ ಭಂಗ ಉಂಟಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೂ ಒಳ್ಳೆಯದಲ್ಲ, ಈ

ಕಾನೂನುಗಳಿಗೆ ಸಂಬಂಧಿಸಿದ ನೀತಿಗಳಿಗೂ ಒಳ್ಳೆಯದಲ್ಲ.

೬) ಸಹ ಪ್ರಜೆಗಳೇ,

ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ಪಟೇಲ್, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ರಬೀಂದ್ರನಾಥ್ ಟಾಗೋರ್, ಸುಬ್ರಮಣ್ಯ ಭಾರತಿ ಹಾಗೂ ಇನ್ನೂ ಅನೇಕರ ವೃತ್ತಿ ಮತ್ತು ನಿಲವು ಭಿನ್ನವಾಗಿದ್ದರೂ, ಅವರೆಲ್ಲರೂ ದೇಶಪ್ರೇಮದ ಭಾಷೆಯನ್ನೇ ಮಾತನಾಡುತ್ತಿದ್ದರು. ನಾವು ಹೊಂದಿರುವ ಸ್ವಾತಂತ್ರ್ಯಕ್ಕಾಗಿ, ರಾಷ್ಟ್ರೀಯತೆಯ ಈ ಮಹಾನ್ ಹೋರಾಟಗಾರರಿಗೆ ನಾವು ಋಣಿಯಾಗಿರಬೇಕು. ಭಾರತ ಮಾತೆಯ ವಿಮೋಚನೆಗಾಗಿ ಹೋರಾಡಿ ಮಡಿದ, ಯಾರೂ ಕೊಂಡಾಡದ ವೀರರಿಗೂ ನಮ್ಮ ನಮನ ಸಲ್ಲುತ್ತದೆ. ಆದರೆ ಮಹಿಳೆಯರ ಸುರಕ್ಷತೆಯ ವಿಷಯಕ್ಕೆ ಬಂದಾಗ, ಭಾರತ ಮಾತೆಯ ಮಕ್ಕಳೇ ಆಕೆಯನ್ನು ಗೌರವಿಸದೆ ಇರುವುದನ್ನು ನೋಡಿದಾಗ ನನಗೆ ನೋವಾಗುತ್ತದೆ. ಅತ್ಯಾಚಾರ, ಕೊಲೆಗಳು, ರಸ್ತೆಗಳಲ್ಲಿ ಕಿರುಕುಳ, ಅಪಹರಣ ಮತ್ತು ವರದಕ್ಷಿಣೆ ಸಾವುಗಳಂತಹ ಘಟನೆಗಳಿಂದ ಮಹಿಳೆಯರು ತಮ್ಮತಮ್ಮ ಮನೆಗಳಲ್ಲೇ ಭಯಪಡುವಂತಾಗಿದೆ. ರಬೀಂದ್ರನಾಥ್ ಟಾಗೋರರು ಮಹಿಳೆಯರನ್ನು ಅವರ ಕುಟುಂಬದ ಬೆಳಕಿನ ದೇವತೆಯರನ್ನಾಗಿ ಮಾತ್ರವಲ್ಲದೆ, ಆತ್ಮದ ಜ್ಯೋತಿಯಾಗಿಯೂ ಕಂಡರು, ನಮ್ಮ ಮಕ್ಕಳು ಸನ್ನಡತೆಯ ಎಲ್ಲ ತತ್ವಗಳನ್ನು ಮತ್ತು ಮಹಿಳೆಯರ ಮೇಲಿನ ಗೌರವವನ್ನು ಮರೆತಿರುವುದಕ್ಕೆ ತಂದೆತಾಯಿಯರಾಗಿ, ಶಿಕ್ಷಕರಾಗಿ, ನಾಯಕರಾಗಿ ನಾವೆಲ್ಲಿ ವಿಫಲರಾಗಿದ್ದೇವೆ? ನಾವು ಈ ಬಗ್ಗೆ ಅನೇಕ ಶಾಸನಗಳನ್ನು ಮಾಡಿದ್ದೇವೆ. ಆದರೆ ಬೆಂಜಮಿನ್ ಫ್ರಾಂಕ್ಲಿನ್ ಹೇಳಿದಂತೆ, " ಅನ್ಯಾಯದಿಂದ ತೊಂದರೆಗೊಳಗಾದವರು ಎಷ್ಟು ಕ್ರೋಧಗೊಳ್ಳುತ್ತಾರೋ ತೊಂದರೆಗೊಳಗಾಗದವರೂ ಅಷ್ಟೇ ಕ್ರೋಧಗೊಳ್ಳುವವರೆಗೆ ನ್ಯಾಯ ಸಲ್ಲುವುದಿಲ್ಲ" ಯಾವುದೇ ರೀತಿಯ ಹಿಂಸೆಯಿಂದ ಮಹಿಳೆಯರ ಗೌರವವನ್ನು ಕಾಪಾಡುವ ಶಪಥವನ್ನು ಪ್ರತಿಯೊಬ್ಬ ಭಾರತೀಯನೂ ಕೈಗೊಳ್ಳಬೇಕು. ತನ್ನ ಮಹಿಳೆಯರನ್ನು ಗೌರವಿಸುವ ಹಾಗೂ ಅವರನ್ನು ಸಬಲಗೊಳಿಸುವ ದೇಶ ಮಾತ್ರ ಜಾಗತಿಕ ಬಲಿಷ್ಠ ರಾಷ್ಟ್ರವಾಗಬಲ್ಲದು.

೭) ಸಹ ಪ್ರಜೆಗಳೇ,

ಭಾರತದ ಸಂವಿಧಾನ ಪ್ರಜಾಪ್ರಭುತ್ವದ ಗ್ರಂಥ. ಅನೇಕತೆಯ ಬಗ್ಗೆ ಸಂಭ್ರಮಪಟ್ಟಿರುವ, ಸಹನೆಯನ್ನು ಎತ್ತಿ ಹಿಡಿದಿರುವ, ವಿಭಿನ್ನ ಸಮುದಾಯಗಳ ನಡುವೆ ಸೌಹಾರ್ದತೆಯನ್ನು ಬೆಳೆಸಿರುವ ನಾಗರಿಕತೆಯನ್ನು ಹೊಂದಿದ ಭಾರತದ ಸಾಮಾಜಿಕ-ಆರ್ಥಿಕ ಪರಿವರ್ತನೆಗೆ ಈ ಸಂವಿಧಾನ ಒಂದು ಧ್ರುವತಾರೆ. ಆದರೆ ಈ ಮೌಲ್ಯಗಳನ್ನು ಅತ್ಯಂತ ಕಾಳಜಿ ಮತ್ತು ಎಚ್ಚರಿಕೆಯಿಂದ ಕಾಪಾಡಬೇಕಾಗಿದೆ. ರಾಜಕೀಯ ಸಂವಾದ ನಮ್ಮ ಸಾಂಪ್ರದಾಯಿಕ

ಗುಣಲಕ್ಷಣಗಳಿಗೆ ಅಸಹನೀಯವಾದ ಚಿತ್ತವಿಕೋಪದ ಸ್ಪರ್ಧೆಯಾಗಿಬಿಟ್ಟಾಗ, ಪ್ರಜಾಪ್ರಭುತ್ವದಲ್ಲಿ ಅಂತರ್ಗತವಾದ ಸ್ವಾತಂತ್ರ್ಯ ಕೆಲವೊಮ್ಮೆ ಅಹಿತವಾದ ಉಪಉತ್ಪನ್ನವನ್ನು ಸೃಷ್ಟಿಸುತ್ತದೆ. ನಾಲಗೆಯ ಹಿಂಸೆ ಜನರ ಹೃದಯಗಳನ್ನು ಚುಚ್ಚಿ ಗಾಯಗೊಳಿಸುತ್ತದೆ. ಮತಧರ್ಮ ಏಕತೆಯ ಶಕ್ತಿ ಎಂದು ಗಾಂಧೀಜಿ ಹೇಳಿದ್ದರು; ಅದನ್ನು ನಾವು ಘರ್ಷಣೆಯ ಕಾರಣವನ್ನಾಗಿ ಮಾಡಬಾರದು.

ಸಹ–ಪ್ರಜೆಗಳೇ,

೮) ಭಾರತದ ಮೃದು ಶಕ್ತಿಯ ಬಗ್ಗೆ ಬಹಳ ಹೇಳಲಾಗಿದೆ. ಆದರೆ ಅನೇಕ ದೇಶಗಳು ಅಂಥ ಮತ ಶ್ರದ್ಧೆಯ ಹಿಂಸಾಚಾರದ ಕೆಸರಿನಲ್ಲಿ ಮುಳುಗುತ್ತಿರುವ ಅಂತಾರಾಷ್ಟ್ರೀಯ ಪರಿಸರದಲ್ಲಿ, ಮತಧರ್ಮದ ನಂಬಿಕೆ ಮತ್ತು ರಾಜಕೀಯ ವ್ಯವಸ್ಥೆಯ ನಡುವಣ ಸಂಬಂಧದ ನಮ್ಮ ಲಕ್ಷಣ ನಿರೂಪಣೆಯಲ್ಲಿ ಭಾರತದ ಮೃದು ಶಕ್ತಿಯ ಅತ್ಯಂತ ಪ್ರಬಲ ಉದಾಹರಣೆ ಅಡಗಿದೆ. ನಾವು ಯಾವಾಗಲೂ ಮತಧರ್ಮದ ನಂಬಿಕೆ–ಸಮಾನತೆಯಲ್ಲಿ ವಿಶ್ವಾಸವಿಟ್ಟದ್ದೇವೆ. ಅಲ್ಲಿ ಪ್ರತಿಯೊಂದು ಮತಧರ್ಮದ ನಂಬಿಕೆ ಕಾನೂನಿನ ಮುಂದೆ ಸಮಾನವಾಗಿದೆ ಹಾಗೂ ಪ್ರತಿಯೊಂದು ಸಂಸ್ಕೃತಿ ಇನ್ನೊಂದರಲ್ಲಿ ಬೆರೆತು ಸಕಾರಾತ್ಮಕ ಕ್ರಿಯಾಶಕ್ತಿಯನ್ನು ಸೃಷ್ಟಿಸುತ್ತದೆ. ಏಕತೆಯೇ ಬಲ, ದಬ್ಬಾಳಿಕೆಯೇ ದೌರ್ಬಲ್ಯ ಎಂದು ಭಾರತದ ಜಾಣ್ಮೆ ನಮಗೆ ಕಲಿಸುತ್ತದೆ.

೯) ಸಹ–ಪ್ರಜೆಗಳೇ,

ಬಹುದೇಶಗಳ ನಡುವಣ ಸಂಘರ್ಷ ಸರಹದ್ದುಗಳನ್ನು ವಂಶವೃಕ್ಷಗಳನ್ನಾಗಿ ಪರಿವರ್ತಿಸಿ ಭಯೋತ್ಪಾದನೆಯನ್ನು ಒಂದು ಕೇಡಿನ ಕೈಗಾರಿಕೆಯನ್ನಾಗಿ ಮಾಡಿದೆ. ಭಯೋತ್ಪಾದನೆ ಮತ್ತು ಹಿಂಸೆ ನಮ್ಮ ಗಡಿಗಳ ಮೂಲಕ ನುಸುಳುತ್ತಿವೆ. ಶಾಂತಿ ಅಹಿಂಸೆ ಹಾಗೂ ಉತ್ತಮ ನೆರೆಹೊರೆಯ ಉದ್ದೇಶಗಳು ನಮ್ಮ ವಿದೇಶಾಂಗ ನೀತಿಯ ಮೂಲಭೂತ ಅಂಶಗಳಾಗಿಯೇ ಇರಬೇಕಾದರೂ, ಒಂದು ಅಭ್ಯುದಯದ ಮತ್ತು ಸಮಾನತೆಯ ಭಾರತದತ್ತ ನಾವು ಸಾಧಿಸುತ್ತಿರುವ ಪ್ರಗತಿಗೆ ಅಡ್ಡಿಯಂಟುಮಾಡಲು ಯಾವುದಕ್ಕೂ ಹೇಸದ ವೈರಿಗಳ ಬಗ್ಗೆ ನಾವು ಆಲಸ್ಯದಿಂದ ಇರುವಂತಿಲ್ಲ. ನಮ್ಮ ಜನತೆಯ ವಿರುದ್ಧ ಇಂತಹ ಯುದ್ಧ ನಡೆಸುತ್ತಿರುವ ಸೂತ್ರಧಾರರನ್ನು ಸೋಲಿಸುವ ಬಲ, ವಿಶ್ವಾಸ ಮತ್ತು ದೃಢ ನಿಶ್ಚಯ ನಮ್ಮಲ್ಲಿದೆ. ನಿಯಂತ್ರಣ ರೇಖೆಯುದ್ದಕ್ಕೂ ಕದನವಿರಾಮದ ಉಲ್ಲಂಘನೆ ಪದೇಪದೇ ಆಗುತ್ತಿರುವುದಕ್ಕೆ ಹಾಗೂ ಭಯೋತ್ಪಾದಕ ದಾಳಿಗಳಿಗೆ ತೀಕ್ಷ್ಣ ರಾಜತಾಂತ್ರಿಕ ಕ್ರಮಗಳು ಮತ್ತು ಅಭೇದ್ಯ ಭದ್ರತಾ ವ್ಯವಸ್ಥೆಗಳ ಮೂಲಕ ಸಂಘಟಿತ ಪ್ರತಿಕ್ರಿಯೆ ದೊರಕಬೇಕು. ಭಯೋತ್ಪಾದನೆಯ ಪಿಡುಗಿನ ವಿರುದ್ಧದ ಹೋರಾಟದಲ್ಲಿ ಜಗತ್ತು ಭಾರತ ದೊಡನೆ ಕೈಜೋಡಿಸಬೇಕು.

೧೦) ಸಹ–ಪ್ರಜೆಗಳೇ,

ಆರ್ಥಿಕ ಪ್ರಗತಿಯೂ ಪ್ರಜಾಪ್ರಭುತ್ವದ ಒಂದು ಪರೀಕ್ಷೆಯೇ. ೨೦೧೫ರ ವರ್ಷ ಆಸೆಯ ಒಂದು ವರ್ಷ. ಪ್ರಮುಖ ಆರ್ಥಿಕ ಸೂಚನೆಗಳು ಬಹಳಷ್ಟು ಆಶಾವಾದ ಮೂಡಿಸಿವೆ. ವಿದೇಶಿ ವಲಯದ ಬಲವರ್ಧನೆ, ವಿತ್ತೀಯ ಸಂಘಟನೆಯತ್ತ ಕ್ರಮ, ಬೆಲೆಗಳಲ್ಲಿ ಸ್ತಿಮಿತ, ತಯಾರಿಕಾ ವಲಯದ ಚೇತರಿಕೆಯ ಪ್ರಾರಂಭಿಕ ಸೂಚನೆಗಳು ಹಾಗೂ ಕಳೆದ ವರ್ಷದ ದಾಖಲೆ ಕೃಷಿ ಉತ್ಪಾದನೆ ನಮ್ಮ ಆರ್ಥಿಕತೆಗೆ ಶುಭ ಸೂಚನೆಗಳಾಗಿವೆ. ೨೦೧೪–೨೦೧೫ರ ಸಾಲಿನ ಮೊದಲೆರಡು ತ್ರೈಮಾಸಿಕಗಳಲ್ಲಿ ತಲಾ ಶೇಕಡ ೫ರ ಮೇಲ್ಪಟ್ಟ ಅಭಿವೃದ್ಧಿ ಪ್ರಮಾಣದ ಸಾಧನೆ ಶೇಕಡ ೭ ರಿಂದ ೮ರ ಅಧಿಕ ಬೆಳವಣಿಗೆಯ ಪ್ರಮಾಣದ ವಿಕ್ಷೇಪಪಥಕ್ಕೆ ಪುನಃ ಬೇಗ ಮರಳುವ ಆರೋಗ್ಯಕರ ಸೂಚನೆಯಾಗಿದೆ.

೧೧) ಒಂದು ಸಮಾಜದ ಯಶಸ್ಸನ್ನು ಅದರ ಉಳಿವು ಹಾಗೂ ಅದರ ಮೌಲ್ಯಗಳು, ಸಂಸ್ಥೆಗಳು ಮತ್ತು ಆಳ್ವಿಕೆಯ ಸಾಧನಗಳ ಬಲವರ್ಧನೆಯಿಂದ ಅಳೆಯಲಾಗುತ್ತದೆ. ನಮ್ಮ ರಾಷ್ಟ್ರೀಯ ನಿರೂಪಣೆ ದೇಶದ ಇತಿಹಾಸದ ತತ್ವಗಳು ಮತ್ತು ಇಂದಿನ ವಿಜಯಗಳಿಂದ ರೂಪುಗೊಂಡಿದ್ದು ಅದರ ಸುತ್ತ ಸಾಮರ್ಥ್ಯ ಪುಟಿದೇಳುವುದರಿಂದ ಭವಿಷ್ಯವನ್ನು ತನ್ನದಾಗಿಸಿಕೊಳ್ಳಲು ಈಗ ಸಿದ್ಧವಾಗಿದೆ.

೧೨) ಸಹ–ಪ್ರಜೆಗಳೇ,

ಮೇಲಿಂದ ಮೇಲೆ ಚಿಮ್ಮುವಂತಹ ಅಬಿವೃದ್ಧಿಯಿಂದ ಭಾರತೀಯರ ಜೀವನದ ಗುಣಮಟ್ಟವನ್ನು ಸುಧಾರಿಸುವುದು ಹಾಗೂ ಶಿಕ್ಷಣ, ದೇಶಪ್ರೇಮ, ಅನುಕಂಪ, ಪ್ರಾಮಾಣಿಕತೆ ಮತ್ತು ಕರ್ತವ್ಯ ಪ್ರಜ್ಞೆಯಿಂದ ಪ್ರಬುದ್ಧಗೊಳ್ಳುವ ಪೀಳಿಗೆಗಳನ್ನು ಬೆಳೆಸುವುದು ನಮ್ಮ ರಾಷ್ಟ್ರೀಯ ಮಹತ್ವಾಕಾಂಕ್ಷೆ. ಥಾಮಸ್ ಜೆಫರ್ಸನ್ ಅವರ ಮಾತುಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. ಇಡೀ ಜನ ಸಮೂಹಕ್ಕೆ ಶಿಕ್ಷಣ ನೀಡಿ, ಮಾಹಿತಿ ನೀಡಿ..... ನಮ್ಮ ಸ್ವಾತಂತ್ರ್ಯವನ್ನು ಕಾಪಾಡಲು ಅವರನ್ನು ಮಾತ್ರ ಖಂಡಿತವಾಗಿಯೂ ಮೆಚ್ಚಬಹುದು ಎಂದು ಅವರು ಹೇಳಿದ್ದರು. ಕಾಣಬಹುದಾದ ಭವಿಷ್ಯದಲ್ಲಿ, ೨೧ನೆಯ ಶತಮಾನದ ಜ್ಞಾನಶ್ರೇಷ್ಠ ದೇಶಗಳಲ್ಲಿ ನಾವು ಸ್ಥಾನ ಗಳಿಸಲು ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಅತ್ಯುತ್ಕೃಷ್ಟ ಗುಣಮಟ್ಟ ಹೊಂದಲು ನಾವು ಶ್ರಮಿಸಬೇಕು. ತರಗತಿಯಿಂದಾಚೆಗೆ ಜ್ಞಾನವನ್ನು ಒಯ್ಯುವ ಹಾಗೂ ತಕ್ಷಣದ ಮತ್ತು ಕ್ಷಣಿಕ ಪ್ರಯೋಜಕನದ ಒತ್ತಡದಿಂದ ಕಲ್ಪನಾ ಶಕ್ತಿಯನ್ನು ಮುಕ್ತಗೊಳಿಸುವ ಪುಸ್ತಕಗಳು ಮತ್ತು ಓದಿನ ಸಂಸ್ಕೃತಿಗೆ ನಾವು ವಿಶೇಷ ಒತ್ತು ನೀಡಬೇಕೆಂದು ನಾನು ಆಗ್ರಹಪಡಿಸುತ್ತೇನೆ. ನಾವು ಅಸಂಖ್ಯಾತ ಹಾಗು ಪರಸ್ಪರ ಸಂಪರ್ಕಹೊಂದಿದ ವಿಚಾರಗಳ ನದಿಗಳಿಂದ ಪೋಷಣೆ ಪಡೆಯುವ ಸೃಜನಶೀಲ ಜನರಾಗಬೇಕು. ಮೋಡ ಗಡಿಗಳಿಲ್ಲದ ಗ್ರಂಥ ಭಂಡಾರವಾಗಿರುವ ಹಾಗೂ ನಿಮ್ಮ ಅಂಗೈಯಲ್ಲಿನ ಕಂಪ್ಯೂಟರ್‌ನಲ್ಲಿ ಅಪಾರ ಅವಕಾಶಗಳಿರುವ ವಿಶ್ವದಲ್ಲಿ ತಂತ್ರಜ್ಞಾನ ಮತ್ತು ಸಂಪರ್ಕದಲ್ಲಿ ನೈಪುಣ್ಯ

ಸಾಧಿಸುವಲ್ಲಿ ನಮ್ಮ ಯುವಜನರು ಮುಂದಾಳತ್ವ ವಹಿಸಬೇಕು. ೨೧ನೆಯ ಶತಮಾನ ಭಾರತದ ಹಿಡಿತದಲ್ಲಿದೆ.

೧೩) ಸಹ-ಪ್ರಜೆಗಳೇ,

ಹಿಮ್ಮುಖದ ಹವ್ಯಾಸಗಳು ಮತ್ತು ಸಾಮಾಜಿಕ ಅನಿಷ್ಟಗಳಿಂದ ನಮ್ಮನ್ನು ನಾವೇ ಸತತವಾಗಿ ಸ್ವಚ್ಛ ಮಾಡಿಕೊಳ್ಳುವ ಸಾಮರ್ಥ್ಯವನ್ನು ನಾವು ಕಂಡುಕೊಳ್ಳದೇ ಇದ್ದರೆ ಭವಿಷ್ಯ ಕಣ್ಣಿಗೆ ಕಾಣಲೂಬಹುದು,ಕಣ್ಣಿಗೆ ಕಾಣದೆ ತಪ್ಪಿಸಿಕೊಳ್ಳಲೂಬಹುದು. ಕಳೆದ ಶತಮಾನದಲ್ಲಿ ಈ ಹಿಮ್ಮುಖದ ಹವ್ಯಾಸಗಳು ಮತ್ತು ಸಾಮಾಜಿಕ ಅನಿಷ್ಟಗಳಲ್ಲಿ ಕೆಲವು ಸತ್ತಿವೆ, ಕೆಲವು ಮಾಸಿವೆ ಹಾಗೂ ಹಲವು ಇನ್ನೂ ಉಳಿದಿವೆ.

ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿದ ಘಟನೆಯ ಶತಮಾನೋತ್ಸವವನ್ನು ನಾವು ಈ ವರ್ಷ ಆಚರಿಸುತ್ತಿದ್ದೇವೆ. ಮಹಾತ್ಮರಿಂದ ನಾವು ಕಲಿಯುವುದು ಎಂದೂ ಮುಗಿಯದು. ೧೯೧೫ರಲ್ಲಿ ಅವರು ಮಾಡಿದ ಮೊದಲ ಕಾರ್ಯವೆಂದರೆ ತಮ್ಮ ಕಣ್ಣುಗಳನ್ನು ತೆರೆದಿರುವುದು ಹಾಗೂ ಬಾಯಿ ಮುಚ್ಚಿರುವುದು. ಅವರ ಉದಾಹರಣೆಯನ್ನು ಅನುಸರಿಸುವುದು ಒಳಿತು. ೧೯೧೫ರ ಮೇಲೆ ನಾವು ಗಮನವನ್ನು ಕೇಂದ್ರೀಕರಿಸಿರುವುದು ಸರಿಯೇ ಆದರೂ ೧೯೦೧ರಲ್ಲಿ ಗಾಂಧೀಜಿ ಏನು ಮಾಡಿದರು ಎಂಬ ಬಗ್ಗೆ ಬಹುಶ ನಾವು ಒಂದು ದೃಷ್ಟಿ ಹರಿಸಬೇಕು. ಅವರು ತಮ್ಮ ಮೊದಲ ವಿರಾಮದಲ್ಲಿ ದೇಶಕ್ಕೆ ಹಿಂತಿರುಗಿದಾಗ ಆ ವರ್ಷ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನ ಬ್ರಿಟಿಷ್ ಭಾರತದ ಆಗಿನ ರಾಜಧಾನಿ ಕಲ್ಕತ್ತೆಯಲ್ಲಿ ನಡೆಯಿತು. ಗಾಂಧೀಜಿ ಒಬ್ಬ ಪ್ರತಿನಿಧಿಯಾಗಿದ್ದರು. ಅವರು ಸಭೆಯೊಂದರಲ್ಲಿ ಭಾಗವಹಿಸಲು ರಿಪನ್ ಕಾಲೇಜಿಗೆ ಹೋದರು. ಸಹ ಪ್ರತಿನಿಧಿಗಳು ಇಡೀ ಸ್ಥಳವನ್ನು ಗಲೀಜು ಮಾಡಿದ್ದನ್ನು ಅವರು ಕಂಡರು. ಸ್ವಚ್ಛತೆಗೆ ನೇಮಕಗೊಂಡಿದ್ದ ಯಾವ ವ್ಯಕ್ತಿಗೂ ಕಾಯದೆ, ಗಲೀಜಿನಿಂದ ಅಪ್ರತಿಭಗೊಂಡಿದ್ದ ಗಾಂಧೀಜಿ ಪೊರಕೆಯೊಂದನ್ನು ಹಿಡಿದು ಇಡೀ ಸ್ಥಳವನ್ನು ಸ್ವಚ್ಛಗೊಳಿಸಿದರು. ೧೯೦೧ರಲ್ಲಿ ಯಾರೂ ಅವರ ಉದಾಹರಣೆಯನ್ನು ಅನುಸರಿಸಲಿಲ್ಲ. ೧೧೪ ವರ್ಷಗಳ ನಂತರ ನಾವು ಅವರ ಉದಾಹರಣೆಯನ್ನು ಅನುಸರಿಸೋಣ ಹಾಗೂ ಒಬ್ಬ ಶ್ರೇಷ್ಠ ತಂದೆಯ ಅರ್ಹ ಮಕ್ಕಳಾಗೋಣ.

ಜೈ ಹಿಂದ್ ( ಆಕಾಶವಾಣಿ ಕೃಪೆ )

# ಮುಸ್ಲಿಂಮರು ಆದರ್ಶ ನಡೆಯನ್ನು ನಡೆದು ತೋರಿಸಲಿ

– ಮೌಲಾನಾ ವಹೀದುದ್ದೀನ್ ಖಾನ್

ಬಹುತೇಕವಾಗಿ ಭಾರತದ ಚರಿತ್ರೆಯಲ್ಲಿ ೧೯೪೭ರವರೆಗೆ ಮುಸ್ಲಿಮರು ಇತರರೊಂದಿಗೆ ಸೌಹಾರ್ದಯುತವಾಗಿ ಬದುಕಿದ್ದರು. ರಾಜಕೀಯವೂ ಸೇರಿದಂತೆ ಇತರ ಎಲ್ಲಾ ಕ್ಷೇತ್ರಗಳಲ್ಲಿ ಅವರು ಭಾಗಿಯಾಗಿದ್ದರು. ಇತರರೊಂದಿಗೆ ಒಂದಾಗಿ ಬಾಳಿದ್ದರು. ಆದರೆ, ಬ್ರಿಟಿಷರಿಂದ ಭಾರತಕ್ಕೆ ವಿಮೋಚನೆ ದೊರಕುತ್ತದೆ ಎಂಬುದು ಇನ್ನೇನು ಖಚಿತವಾದಾಗ, ಕೆಲವು ಮುಸ್ಲಿಂ ನಾಯಕರಲ್ಲಿ ರಾಜಕೀಯ ಮಹತ್ವಾಕಾಂಕ್ಷೆ ಮೊಳಕೆಯೊಡೆಯಿತು. ಅವರು ಸ್ವತಂತ್ರ ಭಾರತದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ಲೆಕ್ಕಾಚಾರ ಹಾಕಿದರು. ಆದರೆ, ಇದು ಈಡೇರುವುದಿಲ್ಲ ಎನಿಸಿದಾಗ, ಭಾರತದ ವಿಭಜನೆ ಅನಿವಾರ್ಯವಾಯಿತು. ಜೊತೆಗೆ ಅವರು ತಮಗೆ 'ಸಮಸ್ಯಾತ್ಮಕ ಸಮುದಾಯ' ಎಂಬ ಹೆಸರನ್ನು ಪಡೆದುಕೊಂಡರು. ಭಾರತದಲ್ಲಿ ಇದುವರೆಗೂ ಮುಸ್ಲಿಮರಿಗೆ ಬಂದಿರುವ ಸ್ಥಿತಿಗೆ ಮೂಲಬಿಂದು ಇದೇ ಎಂದು ನಾನು ಗುರುತಿಸಬಯಸುತ್ತೇನೆ.

ಭಾರತದಲ್ಲಿ ಅತಿದೊಡ್ಡ ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯ ಮುಸ್ಲಿಮರದ್ದು. ಅವರು ಇಲ್ಲಿನ ಇತರ ಸಮುದಾಯಗಳ ಜೊತೆ ಸೌಹಾರ್ದಯುತ ಸಂಬಂಧವನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು ಇಚ್ಛಿಸಿರುವುದೇ ಆದಲ್ಲಿ, ಅವರು ಪೂರ್ಣ ಮನಸ್ಸಿನಿಂದ ಇಲ್ಲಿನ ಬಹುಸಂಸ್ಕೃತಿ ಪರಂಪರೆಯನ್ನು ಒಪ್ಪಿಕೊಳ್ಳಬೇಕು. ಇಲ್ಲಿ ಶಾಂತಿ, ಸೌಹಾರ್ದ, ಪ್ರಗತಿ ಸಾಧನೆಗೆ ಅವರು ತಮ್ಮ ಶಕ್ತಿಮೀರಿ ಕೊಡುಗೆಯನ್ನು ನೀಡಬೇಕು. ಮುಸ್ಲಿಮರು ತಮ್ಮನ್ನು ಪ್ರತ್ಯೇಕ ಗುಂಪಾಗಿ ಸದಾ ಗುರುತಿಸಿಕೊಳ್ಳುವುದು ತರವಲ್ಲ; ಏಕೆಂದರೆ, ನಮ್ಮ ಪ್ರಕೃತಿಯೇ ಬಹುಸಂಸ್ಕೃತಿಯನ್ನು ಹೊಂದಿದೆ. ಇದು ಸೂರ್ಯನ ಬೆಳಕಿನಷ್ಟೇ ಸತ್ಯ. ಹಾಗಾಗಿ, ಇಲ್ಲಿ ನಾವು ಎಲ್ಲರೂ ನಮ್ಮ ನಮ್ಮ ಸಂಸ್ಕೃತಿ, ನಂಬಿಕೆ, ಪರಂಪರೆ, ಆಚಾರ–ವಿಚಾರ ಇತ್ಯಾದಿ 'ನಮಗೆ ಶ್ರೇಷ್ಠ' ಎಂದುಕೊಳ್ಳಲು ಅವಕಾಶ ಇದೆ. ಇದನ್ನು ನಾನು ಮುಸ್ಲಿಮರಿಗೂ, ಮುಸ್ಲಿಮೇತರರಿಗೂ ಸಮಾನವಾಗಿ ಹೇಳಲು ಬಯಸುತ್ತೇನೆ. ಆದರೆ, ಮುಸ್ಲಿಮರು ನನ್ನ ಧರ್ಮೀಯರಾಗಿರುವ ಕಾರಣಕ್ಕೆ ಮೊದಲು ಅವರಿಗೆ ಹೇಳಲು ಬಯಸುತ್ತೇನೆ.

ಇಲ್ಲಿ ನಾನು ಇನ್ನೊಂದು ಮಾತನ್ನು ಅತ್ಯಂತ ಸ್ಪಷ್ಟವಾಗಿ ಮತ್ತು ಖಚಿತವಾಗಿ ಹೇಳಲೇಬೇಕು. ಇದರಲ್ಲಿ ಯಾರಿಗೂ ಸಂದೇಹ ಇರಬೇಕಿಲ್ಲ. ಒಂದು ನಾಡಿನಲ್ಲಿರುವ ಮುಸ್ಲಿಮೇತರ ಸಮುದಾಯದೊಂದಿಗೆ ಸೌಹಾರ್ದಯುತವಾಗಿ, ಕೊಡು–ಕೊಳ್ಳುವಿಕೆಯಿಂದ, ಪ್ರೀತಿ–ವಿಶ್ವಾಸಗಳಿಂದ ನಡೆದುಕೊಳ್ಳಬೇಕು ಎಂಬುದು ಇಸ್ಲಾಂ ಧರ್ಮದ ಬೋಧನೆಯಲ್ಲೇ ಇದೆ. ಹಾಗೆ ನಡೆದುಕೊಳ್ಳದೇ ಹೋಗುವುದು ಇಸ್ಲಾಂ

ಬೋಧನೆಗೆ ಪೂರ್ತಿ ಅಪಚಾರ ಎಸಗುವ ನಡವಳಿಕೆ ಆಗುತ್ತದೆ. ನಾವು ಭಾರತದಲ್ಲಿ ಎಲ್ಲರೊಂದಿಗೆ ಸೌಹಾರ್ದದಿಂದ ಬದುಕುವುದರಿಂದ ಇಸ್ಲಾಂ ಬೋಧನೆಯನ್ನು ಪೂರ್ಣವಾಗಿ ಅನುಸರಿಸಿದಂತಾಗುತ್ತದೆ. ನನ್ನ ಈ ಮಾತನ್ನು ಇನ್ನೂ ಅರ್ಥಪೂರ್ಣವಾಗಿಸಲು ನಾನು ಕೆಲವೊಂದು ಐತಿಹಾಸಿಕ ಉದಾಹರಣೆಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

**ಒಂದು ಸಂದರ್ಭ**

ಮೆಕ್ಕಾದಲ್ಲಿ ಅಬು ತಾಲಿಬ್, ಪ್ರವಾದಿ ಮುಹಮ್ಮದ್ ಅವರ ಕಟ್ಟಾ ಬೆಂಬಲಿಗ. ತಾವು ಸ್ವೀಕರಿಸಿದ ದೇವರ ನುಡಿಗಳನ್ನು ಜನರೊಂದಿಗೆ ಹಂಚಿಕೊಳ್ಳಲು ಇವರು ತುಂಬಾ ನೆರವಾಗುತ್ತಿದ್ದರು. ಇವರ ನಿಧನಾನಂತರ, ಇವರ ಜಾಗಕ್ಕೆ ಇನ್ನೊಬ್ಬರನ್ನು ನೇಮಿಸಿಕೊಳ್ಳಲು ಪ್ರವಾದಿವರ್ಯರು ಆಲೋಚಿಸಿದರು. ಇದಕ್ಕಾಗಿ ಅವರು ಹಲವಾರು ಕಡೆ ಪ್ರವಾಸ ಕೈಗೊಂಡರು. ಹತ್ತು ಹಲವು ಪಂಗಡಗಳನ್ನು ಭೇಟಿ ಮಾಡಿದರು. ತಾವು ಸ್ವೀಕರಿಸಿದ ದೇವರ ನುಡಿಗಳನ್ನು ಜನರೊಂದಿಗೆ ಹಂಚಿಕೊಳ್ಳುವ ತಮ್ಮ ಕಾರ್ಯದಲ್ಲಿ ತಮಗೆ ನೆರವು ನೀಡಬಲ್ಲ ವ್ಯಕ್ತಿಯನ್ನು ಹುಡುಕಿಕೊಳ್ಳುವುದು ಪ್ರವಾದಿವರ್ಯರ ಉದ್ದೇಶವಾಗಿತ್ತು. ಇದನ್ನು ಅವರು ಎಲ್ಲಾ ಪಂಗಡಗಳವರಿಗೆ ತಿಳಿಸಿದರು. ತಮ್ಮ ಮೇಲಿನ ಗೌರವದ ಬದಲು, ತಾವು ವಹಿಸಿಕೊಡಲು ಉದ್ದೇಶಿಸಿರುವ ಕಾರ್ಯದ ಮೇಲೆ ಗೌರವ-ನಂಬಿಕೆ ಇದ್ದವರು ಮಾತ್ರ ತಮಗೆ ಬೇಕಿದೆ ಎಂಬುದನ್ನು ಮತ್ತೆ ಮತ್ತೆ ಸ್ಪಷ್ಟಪಡಿಸಿದರು.

**ಇನ್ನೊಂದು ಸಂದರ್ಭ**

ಇಸ್ಲಾಂ ಧರ್ಮವು ಜನಮಾನಸದಲ್ಲಿ ಬೇರೂರುತ್ತಿದ್ದ ಅಮಯದಲ್ಲಿ ಮೆಕ್ಕಾ ಬಳಿಯ ಕಾಲಬಾದಲ್ಲಿ ೩೬೦ ದೇವರ ಮೂರ್ತಿಗಳು ಒಂದೆಡೆ ಸಿಗುತ್ತವೆ. ಇದು ಪ್ರವಾದಿವರ್ಯರಿಗೆ ಗೊತ್ತಾಗುತ್ತದೆ. ಆಗ ಅವರು ಆಸ್ತಿಕರಿಗೆ ಕುರಾನ್ ನೀಡಿದ ಮೊದಲನೇ ಆದೇಶ 'ಇಕ್ರಾ'ವನ್ನು ಪಾಲಿಸುತ್ತಾರೆ. 'ತಿಳಿದುಕೊಳ್ಳಿ, ಅರ್ಥ ಮಾಡಿಕೊಳ್ಳಿ' ಎಂಬುದು ಈ ಆದೇಶದ ಸಾರ. ಈ ದಾರಿಯನ್ನು ಅನುಸರಿಸುವವರು ಸಾಮಾನ್ಯವಾಗಿ ಭಾವೋದ್ವೇಗಕ್ಕೆ ಸಿಲುಕದೆ ಸಮಗ್ರವಾಗಿ ಚಿಂತಿಸುತ್ತಾರೆ; ಸಮಚಿತ್ತದಿಂದ ತೀರ್ಮಾನ ಕೈಗೊಳ್ಳುತ್ತಾರೆ. ಈಗಲೂ ನಾವು ಮಾಡಬೇಕಾಗಿರುವುದು ಇದನ್ನೇ ಅಲ್ಲವೆ?

**ಮತ್ತೊಂದು ಸಂದರ್ಭ**

ಪುರಾತನ ಮೆಕ್ಕಾದಲ್ಲಿ ಅನೇಕರು ಮೂರ್ತಿಪೂಜಕರಿದ್ದರು. ಆದರೂ ಅವರನ್ನು ಪ್ರವಾದಿವರ್ಯರು 'ಮೂರ್ತಿಪೂಜಕರೇ' ಎಂದು ಸಂಬೋಧಿಸಲಿಲ್ಲ; ಅವರನ್ನು 'ನನ್ನ ದೇಶವಾಸಿಗಳೇ' ಎಂದು ಸಂಬೋಧಿಸಿದರು. 'ಇಸ್ಲಾಂ ಒಪ್ಪದವರು ದ್ರೋಹಿಗಳು; ಅವರೇ 'ಕಾಫಿರ್' ರು' ಎಂಬ ಮಾತು ಸರಿಯಲ್ಲ. ವಾಸ್ತವದಲ್ಲಿ 'ಕಾಫಿರ್' ಎಂಬ ಯಾವ ಸಮುದಾಯವೂ ಇಲ್ಲ. ಯಾವೊಂದು ಸಮುದಾಯವನ್ನೂ ನಾವು ಕಾಫಿರ್ ಎಂದು ಗುರುತಿಸುವುದು ಸರಿಯಲ್ಲ. ನಾವು ವಾಸಿಸುವ ದೇಶದಲ್ಲಿರುವವರೆಲ್ಲರೂ ನಮಗೆ ದೇಶವಾಸಿಗಳೇ, ದೇಶಬಂಧುಗಳೇ.

**ಸ್ಪಷ್ಟತೆ ಇರಲಿ**

ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯ ಇರುವ ಹಾಗೆ, ಸಮುದಾಯಗಳ ನಡುವೆ

ಭಿನ್ನಾಭಿಪ್ರಾಯ ಇರುವುದೂ ಸಹಜ. ಆದರೆ ಈ ಭಿನ್ನಾಭಿಪ್ರಾಯದ ತಳಹದಿ ವಿಶ್ವಾಸ, ಗೌರವ, ಪ್ರೀತಿ ಆಗಿರುವುದು ಅತ್ಯವಶ್ಯ. ಇದು ತಪ್ಪಿದರೆ, ಘರ್ಷಣೆಯ, ಬಿಕ್ಕಟ್ಟಿನ ವಾತಾವರಣ ಉಂಟಾಗುತ್ತದೆ; ಇದು ಉಲ್ಬಣಿಸಿ, ಅಸಹನೆ–ದ್ವೇಷ–ಪ್ರತೀಕಾರ–ಷಡ್ಯಂತ್ರದ ಪರಿಸ್ಥಿತಿ ತಲೆದೋರುತ್ತದೆ. ಹೀಗಾಗಬಾರದು ಎನ್ನುವುದಾದರೆ, ಎಲ್ಲಾ ವ್ಯಕ್ತಿಗಳೂ ಮತ್ತು ಸಮುದಾಯಗಳೂ ವಿಶ್ವಾಸದ ವಾತಾವರಣ ಸೃಷ್ಟಿಗೆ ಮೊದಲು ಮುಂದಾಗಬೇಕು. ಒಬ್ಬರನ್ನು ಇನ್ನೊಬ್ಬರು, ಒಂದು ಸಮುದಾಯವನ್ನು ಇನ್ನೊಂದು ಸಮುದಾಯ ಅರ್ಥ ಮಾಡಿಕೊಳ್ಳುವ, ಪರಸ್ಪರರ ಜೊತೆ ಬೆರೆಯುವ, ಪರಸ್ಪರರ ಸುಖ–ದುಃಖವನ್ನು ಹಂಚಿಕೊಳ್ಳುವ ಮೂಲಕ ನಾವು ಇದನ್ನು ಸಾಧಿಸಬಹುದು. ನಮ್ಮ ನಂಬಿಕೆಯ ದಾರಿಯಲ್ಲಿ ಸಾಗುವ ಹಕ್ಕನ್ನು ನಾವು ಉಳಿಸಿಕೊಳ್ಳಬೇಕು; ಇನ್ನೊಬ್ಬರಿಗೆ ಅವರ ನಂಬಿಕೆಯ ದಾರಿಯಲ್ಲಿ ಸಾಗುವುದಕ್ಕೆ ಮುಕ್ತ ಅವಕಾಶ ಇರಬೇಕು. ಇದೇ ಇಮಾನ್ ಎಂಬುದನ್ನು ಪ್ರವಾದಿವರ್ಯರೇ ಹೇಳಿದ್ದಾರೆ.

**ಅಡ್ಡಿ ಏಕೆ?**

ಇಸ್ಲಾಂ ಅನುಯಾಯಿಗಳು ತಮ್ಮ ಪೂಜಾಸ್ಥಳದ ಸುತ್ತಮುತ್ತ ಇತರ ಧರ್ಮೀಯರ ಮೆರವಣಿಗೆಗಳು ಸಾಗಕೂಡದು ಎಂದು ತಿಳಿದಿದ್ದಾರೆ. ಇದು ಸರಿಯೇ? ಇಸ್ಲಾಂ ಹೀಗೆ ಬೋಧಿಸುತ್ತದೆಯೇ?

ಇದಕ್ಕೆ ಉತ್ತರವಾಗಿ, ಪ್ಯಾಲಿಸ್ತೀನ್ ಜಯಿಸಿದ ಬಳಿಕ 'ಜೇರುಸಲೇಂನ ಮಸೀದಿಯ ಮುಂದಿನಿಂದ ಕ್ರೈಸ್ತರ ಮೆರವಣಿಗೆ ಸಾಗುವುದಕ್ಕೆ ಅಡ್ಡಿಪಡಿಸುವುದಿಲ್ಲ' ಎಂದು ಎರಡನೇ ಖಲೀಫ಼ಾ ಉಮರ್ ಇಬ್ನ್ ಅಲ್ ಖತ್ತಾಬ್ ಒಪ್ಪಂದ ಮಾಡಿಕೊಂಡಿದ್ದರು ಎಂಬುದನ್ನು ನಾವು ನೋಡಬೇಕು.

ಹೀಗಿರುವಾಗ, ಭಾರತದಲ್ಲಿ ಮುಸ್ಲಿಮರು ಮಸೀದಿ ಮುಂದಿನಿಂದ ಇತರರು ಮೆರವಣಿಗೆಯಲ್ಲಿ ಸಾಗುವುದಕ್ಕೆ ವಿರೋಧ ಸೂಚಿಸುವ ಅವಶ್ಯಕತೆ ಏನಿಲ್ಲ.

**ಸಣ್ಣ ಕಟುಂಬ**

'ಸಣ್ಣ ಕುಟುಂಬ ಸುಖಿ ಕುಟುಂಬ' ಎಂಬ ತತ್ವವನ್ನು ಸರ್ಕಾರ ಪ್ರಚಾರ ಮಾಡುತ್ತಾ ಬಂದಿದೆ. ಇದರಲ್ಲಿ ಮುಸ್ಲಿಮರು ತಪ್ಪು ಕಾಣುವ ಅವಶ್ಯಕತೆ ಇಲ್ಲ. ಈ ಕುರಿತು ಮುಸ್ಲಿಮರಲ್ಲೇ ತಪ್ಪು ತಿಳುವಳಿಕೆ ಇದೆ. ಇದನ್ನು ಇದನ್ನು ಸಮುದಾಯದಲ್ಲಿನ ಪ್ರಜ್ಞಾವಂತರೇ ದೂರ ಮಾಡಬೇಕು. 'ಕುಟುಂಬ ಸಣ್ಣದಿದ್ದರೆ ಮಕ್ಕಳನ್ನು ಉತ್ತಮ ರೀತಿಯಲ್ಲಿ ಬೆಳೆಸಲು ಸಾಧ್ಯ' ಎಂಬ ಸತ್ಯವನ್ನು ಮುಸ್ಲಿಮರಿಗೆ ಮನವರಿಕೆ ಮಾಡಿ ಕೊಡಬೇಕು. ಅಲ್ಲದೆ, ಸಣ್ಣ ಕುಟುಂಬ ತತ್ವಕ್ಕೆ ಇಸ್ಲಾಂ ಯಾವ ರೀತಿಯಲ್ಲೂ ವಿರೋಧವಾಗಿಲ್ಲ. ಇದನ್ನು ಮುಸ್ಲಿಮರು ಮೊದಲು ಅರ್ಥ ಮಾಡಿಕೊಳ್ಳಬೇಕು.ಪಾಕಿಸ್ತಾನ ತನ್ನನ್ನು ಇಸ್ಲಾಮಿಕ್ ರಾಷ್ಟ್ರ ಎಂದು ಘೋಷಿಸಿಕೊಂಡಿದೆ. ಅಲ್ಲೇ ಸಣ್ಣ ಕುಟುಂಬದ ಬಗ್ಗೆ ಸರ್ಕಾರ ಹತ್ತು ಹಲವು ಕಾರ್ಯಕ್ರಮ/ಪ್ರಚಾರಾಂದೋಲನಗಳನ್ನು ನಡೆಸುತ್ತಿದೆ. ಭಾರತದ ಮುಸ್ಲಿಮರು ಸಣ್ಣ ಕುಟುಂಬ ತತ್ವಕ್ಕೆ ತಮ್ಮ ಧರ್ಮೀಯರಲ್ಲಿ ಮಾನ್ಯತೆ ಸಿಗುವಂತೆ ಮಾಡಬೇಕಿದೆ.

**ಘರ್ಷಣೆಯ ಪರಿಣಾಮ?**

ಭಾರತದಲ್ಲಿ ಮಸೀದಿಗಳ ಸ್ಥಳಾಂತರಕ್ಕೆ ಸಂಬಂಧಿಸಿದಂತೆ ಅನೇಕ ಗಲಭೆಗಳು

ನಡೆದಿವೆ. ಇದರಲ್ಲಿ ಇತರ ಧರ್ಮೀಯರ ಕೈವಾಡ-ಕುಮ್ಮಕ್ಕೂ ಇದೆ. ಆದರೆ, ಮಸೀದಿಯನ್ನು ಸ್ಥಳಾಂತರಿಸುವುದು ಇಸ್ಲಾಂ ಬೋಧನೆಗೆ ವಿರೋಧವಾದುದು ಎಂದು ಮಾತ್ರ ಯಾವ ಮುಸ್ಲಿಮರೂ ತಿಳಿಯಬಾರದು. ಏಕೆಂದರೆ, ಇದಕ್ಕೆ ಧರ್ಮದಲ್ಲಿ ಯಾವುದೇ ಆಧಾರವಿಲ್ಲ. ಅಲ್ಲದೆ, ಸೌದಿ ಅರೇಬಿಯಾ ಸೇರಿದಂತೆ ಅನೇಕ ಮುಸ್ಲಿಂ ರಾಷ್ಟ್ರಗಳಲ್ಲಿ ಒಂದೆರಡಲ್ಲ ನೂರಾರು ಪ್ರಕರಣಗಳಲ್ಲಿ ಮಸೀದಿಗಳನ್ನು ಸ್ಥಳಾಂತರಿಸಲಾಗಿದೆ. ಹಾಗೆಯೆ, ಮುಸ್ಲಿಮರು ರಸ್ತೆಗಳಲ್ಲಿ ನಮಾಜ್ ಮಾಡುವುದು, ಪ್ರಾರ್ಥನೆಯನ್ನು ಧ್ವನಿವರ್ಧಕಗಳ ಮುಖಾಂತರ ಬಿತ್ತರಿಸುವುದು ಸರಿ ಕಾಣುವುದಿಲ್ಲ.

**ಸಾರವೇನು? ಪಾಲನೆ ಆಗುತ್ತಿದೆಯೆ?**

ಇಸ್ಲಾಂ ಧರ್ಮದ ಸಾರವೇನು? ಒಂದೇ ಮಾತಿನಲ್ಲಿ ಅದನ್ನು ಹೇಳಬೇಕೆಂದರೆ, 'ಶಾಂತಿ' ಎನ್ನಬಹುದು. ಇದನ್ನು ಸ್ಥಾಪಿಸುವ ದಿಕ್ಕಿನಲ್ಲಿ ಇಸ್ಲಾಂ ಧರ್ಮೀಯರೇ ಮೊದಲ ಹೆಜ್ಜೆ ಇಡಬೇಕು. ಯಾವ ವಿಷಯದಲ್ಲಿ ಮುಸ್ಲಿಮರೊಂದಿಗೆ ಇತರ ಧರ್ಮೀಯರು ಅಸಮ್ಮತಿ ತೋರುತ್ತಾರೆಯೊ, ಆ ಬಗ್ಗೆ ವಿವೇಚನೆಯಿಂದ ವಿಚಾರ ವಿನಿಮಯ ನಡೆಸುವ ದಾರಿಯೇ ನಮ್ಮದಾಗಬೇಕು. ಸಂದೇಹ ಪಡುವುದು, ದ್ವೇಷ ಮಾಡುವುದು, ಕುತಂತ್ರ ಮಾಡುವುದು, ಪ್ರತೀಕಾರ/ಸೇಡಿಗೆ ಮುಂದಾಗುವುದನ್ನು ಇಸ್ಲಾಂ ಧರ್ಮ ಬೆಂಬಲಿಸುವುದಿಲ್ಲ. ಇಸ್ಲಾಂ ಒಪ್ಪುವವರು ಯಾರೂ ಇಂಥ ಗುಣಗಳನ್ನು ಹೊಂದಿರತಕ್ಕದ್ದಲ್ಲ.

"ಹೀಗೆ ತಗ್ಗಿ-ಬಗ್ಗಿ ನಡೆಯುತ್ತಾ ಹೋದರೆ, ಭಾರತದಲ್ಲಿ ಮುಸ್ಲಿಮರ ತಲೆ ಮೇಲೆ ಇತರ ಧರ್ಮೀಯರು ಚಪ್ಪಡಿ ಎಳೆಯುತ್ತಾರೆ, ಅಷ್ಟೆ. ಆಗ ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ಏನಾದೀತು?..." ಇತ್ಯಾದಿ ಪ್ರಶ್ನೆಗಳನ್ನು ಅನೇಕ ಮುಸ್ಲಿಮರು ನನಗೆ ಕೇಳಿದ್ದಾರೆ.

ಈ ಮನಸ್ಥಿತಿಗೆ ಕಾರಣ ಅಜ್ಞಾನ; ತಪ್ಪು ತಿಳುವಳಿಕೆ. ಇತಿಹಾಸದ ಬಗ್ಗೆ ಅರಿವು ಇಲ್ಲದಿರುವವರ ಪ್ರಶ್ನೆಗಳು ಇವು. ಇಂಥವರಿಗೆ ಸಮಾಧಾನದಿಂದ ತಿಳುವಳಿಕೆ ನೀಡುವ ಅವಶ್ಯಕತೆ ಇದೆ. 'ಹುದಯ್‌ಬಿಯ್ಯಾ ಶಾಂತಿ ಒಪ್ಪಂದ' ನಡೆದಿದ್ದು ಖುದ್ದು ಪ್ರವಾದಿವರ್ಯರ ಮಧ್ಯಸ್ಥಿಕೆಯಲ್ಲಿ. ಈ ಪ್ರಸಂಗವನ್ನು ನನ್ನ ಮುಸ್ಲಿಂ ಬಾಂಧವರು ಗಮನಿಸಬೇಕು. ವಿರೋಧಿಗಳ ಮನಸ್ಸನ್ನು ಗೆಲ್ಲುವ ದಾರಿಯನ್ನು ಪ್ರವಾದಿವರ್ಯರು ಆಯ್ಕೆ ಮಾಡಿಕೊಂಡರು. ಈ ಪ್ರಸಂಗದ ಮೂಲಕ ಪ್ರವಾದಿವರ್ಯರು 'ಶಾಂತಿ ನೆಲೆಸುವ ದಾರಿಯಲ್ಲಿ ನಾವು ಸಾಗುವುದು ಅತ್ಯಗತ್ಯ' ಎಂಬುದನ್ನೇ ಹೇಳಿದ್ದಾರೆ.

ಮುಸ್ಲಿಮರ ಮುಂದಿರುವ ದಾರಿ ಭಾರತದಲ್ಲಿ ಮುಸ್ಲಿಮರು ಸೌಹಾರ್ದಯುತ ಜೀವನವನ್ನು ನಡೆಸಲು ಬೇಕಾದ ವಾತಾವರಣ ನಿರ್ಮಾಣಕ್ಕೆ ಕಾರಣರಾಗಬೇಕು. ಇದಕ್ಕಾಗಿ ಅವರು ಮೊದಲು ತಮ್ಮಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ತಂದುಕೊಳ್ಳಬೇಕಿದೆ. "ಆದರ್ಶ ನಡೆ ಯಾವುದು" ಎಂಬುದನ್ನು ಅವರು ನಡೆದು ತೋರಬೇಕು. ಈ ದಾರಿಯಲ್ಲಿ ನಡೆಯುತ್ತಲೇ, ಅವರು ಇತರ ಧರ್ಮೀಯರಿಗೂ ಸೌಹಾರ್ದದ ನಡವಳಿಕೆ ಯಾವುದು ಎಂಬುದನ್ನು ಮನಗಾಣಿಸಿ ಕೊಡುವುದು ಖಂಡಿತ ಸಾಧ್ಯವಿದೆ.

**ಸಾಭಾರ – ಮುಸ್ಲಿಂ ದನಿ**

# ಮೇಲುಕೋಟೆ ಗ್ರಾಮದ ಸಾಮಾಜಿಕ ಮುಖ

– ಎಂ.ಎ.ಪೊನ್ನಪ್ಪ

(ಎಂ.ಎ.ಪೊನ್ನಪ್ಪ, ಅಧ್ಯಕ್ಷರು : ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ಇವರು ದಿನಾಂಕ : ೭-೨-೨೦೧೫ರಂದು ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಪತ್ರಕರ್ತರಿಗೆ ವೃತ್ತಿ ಕೌಶಲ್ಯ ತರಬೇತಿ ಶಿಬಿರದಲ್ಲಿ ಮಾಡಿದ ಭಾಷಣದ ಸಾರಾಂಶ – ಸಂ)

ಮೇಲುಕೋಟೆಯ ಸಾಹಿತ್ಯ ಸಾಂಸ್ಕೃತಿಕ, ರಾಜಕಾರಣ, ಸ್ವಾತಂತ್ರ್ಯ, ಪತ್ರಿಕೋದ್ಯಮ ಚಲನಚಿತ್ರ ರಂಗ ಹೀಗೆ ನಾನಾ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದ ಊರು. ಕನ್ನಡದ ಶ್ರೇಷ್ಠ ಕವಿ ಪದ್ಮಶ್ರೀ ಡಾ.ಪು.ತಿ.ನರಸಿಂಹಾಚಾರ್ ಅವರು ಕನ್ನಡ ಸಾಹಿತ್ಯದಲ್ಲಿ ಹೆಸರು ಮಾಡಿದ್ದರೆ, ಪತ್ರಿಕಾ ಭೀಷ್ಮ ಎಂದೇ ಹೆಸರಾದ ಖಾದ್ರಿ ಶಾಮಣ್ಣ ಸ್ವಾತಂತ್ರ್ಯ ಹಾಗೂ ಪತ್ರಿಕೊದ್ಯಮದಲ್ಲಿ ಹೆಸರು ಮಾಡಿದವರಾದರೆ ವಿದ್ವಾನ್ ದೇವಶಿಖಾಮಣಿ ಅಳಶಿಂಗಾಚಾರ್ ಕನ್ನಡದಲ್ಲಿ ರಾಮಾಯಣ, ಭಾಗವತ ಬರೆದು ಹೆಸರಾದವರು. ಸಂಸ್ಕೃತ ಕ್ಷೇತ್ರದಲ್ಲಿ ಕವಿ ಜಗ್ಗು ವಕುಳ ಭೂಷಣ, ಎಂ.ಇ.ರಂಗಾಚಾರ್, ಜಗ್ಗು ಸುದರ್ಶನಾಚಾರ್, ಜಗ್ಗು ನರಸಿಂಹಾಚಾರ್, ಲಕ್ಷ್ಮೀತಾತಾಚಾರ್ ಹಾಗೂ ಅರೆಯರ್ ಶ್ರೀ.ರಾಮಶರ್ಮ ಸೇರಿದಂತೆ ಆರು ರಾಷ್ಟ್ರ ಪ್ರಶಸ್ತಿಗಳನ್ನು ಊರು ಪಡೆದುಕೊಂಡಿದ್ದರೆ, ಗಾಂಧಿ-ಜೆಪಿಯ ಅನುಯಾಯಿ ಸುರೇಂದ್ರ ಕೌಲಗಿ ಅವರು ಜನಪದ ಸೇವಾ ಟ್ರಸ್ಟ್ ಸ್ಥಾಪಿಸಿ ಕರುಣಾಗೃಹದ ಮೂಲಕ ಸಾಮಾಜಿಕ ಕ್ಷೇತ್ರದಲ್ಲಿ ಹೆಸರು ಮಾಡಿದ್ದು, ಅವರ ಸಂಪಾದಕತ್ವದಲ್ಲಿ 'ಜನಪದ ವಿಚಾರ' ಮಾಸ ಪತ್ರಿಕೆ ಹೊರ ತರುತ್ತಿರುವುದಲ್ಲದೆ ಪ್ರಸ್ತುತ ರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ 'ಜಮನ್‌ಲಾಲ್ ಬಜಾಜ್' ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸ್ಥಾನೀಕಂ ನಾಗರಾಜ ಅಯ್ಯಂಗಾರ್, ಖಾದ್ರಿ ಅಚ್ಯುತನ್ ಅವರುಗಳು ನಮ್ಮ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ ಎಂಬುದು ನಿಮಗೆ ನಾನು ಹೇಳಬೇಕಾಗಿಲ್ಲ. ಇದೆಲ್ಲ ಈ ಊರಿಗೆ ಹೆಮ್ಮೆ ತಂದಿರುವ ಸಂಗತಿ.

ಶಿಕ್ಷಣ ಕ್ಷೇತ್ರದಲ್ಲಿಯೂ ಊರು ಹಿಂದೆ ಉಳಿದಿಲ್ಲ. ಪ್ರೌಢಶಾಲೆಯವರೆಗೆ ಶಿಕ್ಷಣವಿದ್ದ ಈ ಊರಿನಲ್ಲಿ ಶಿವನಂಜೇಗೌಡ ಹಾಗೂ ಜೊತೆಗಾರರ ಶ್ರಮದಿಂದ ಎಸ್.ಐ.ಟಿ ಪಾಲಿಟೆಕ್ನಿಕ್ ಕಾಲೇಜ್ ಕಂಡಿದೆ. ಜೊತೆಗೆ ಸರ್ಕಾರದ ಪದವಿ ಕಾಲೇಜು ಸಹ ಇದೆ. ಇದರಿಂದಾಗಿ ವಿದ್ಯೆಗಾಗಿ ಹಂಬಲಿಸುವ ಸ್ಥಳೀಯ ಹಾಗೂ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಎರಡು ಶತಮಾನಕ್ಕಿಂತಲೂ ಹಳೆಯದಾದ ಸರ್ಕಾರಿ ಸಂಸ್ಕೃತ ಪಾಠಶಾಲೆ, ಸಂಸ್ಕೃತ ಸಂಶೋಧನಾ ಸಂಸತ್ ಸಹ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿದೆ. ಊರಿನ ಅನೇಕರು ಪತ್ರಿಕೆ ವಿದ್ಯುನ್ಮಾನ ಮಾಧ್ಯಮದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಯತಿರಾಜ ಮಠದ ಸನ್ಯಾಸ ದೀಕ್ಷೆ ಸ್ವೀಕರಿಸಿದ ಶ್ರೀ ತಿರುಸ್ವಾಮಿಯವರ ಸಾಮಾಜಿಕ, ಧಾರ್ಮಿಕ ಹಾಗೂ ಪತ್ತಿಕೋದ್ಯಮ ಸೇವೆಯೂ ಗಣನೀಯ.

ಸ್ವಾತಂತ್ರ್ಯ ಹೋರಾಟಗಾರರಲ್ಲಿ ಖಾದ್ರಿ ಶಾಮಣ್ಣ, ಕುಟೀಜಿ, ಅರೆಯರ್ ಶ್ರೀನಿವಾಸ

ಅಯ್ಯಂಗಾರ್, ಪಿ.ಟಿ.ಕೃಷ್ಣ ಅಯ್ಯಂಗಾರ್, ಕಲ್ಯಾಣಿ ಕೆರೆ ಶ್ರೀನಿವಾಸ ಅಯ್ಯಂಗಾರ್, ರಾಮಾನುಜ ಅಯ್ಯಂಗಾರ್, ಗೋಪಾಲ್, ಗೋಪಾಲಯ್ಯ, ನಾಗರಾಜ ಮುಂತಾದವರು ಅಂದಿನ ಗಾಂಧಿ ಚಳುವಳಿಯ ಸ್ವಾಂತ್ರ್ಯ ಭಕ್ತರು. ನೇತಾರರು.

ಮೇಲುಕೋಟೆಯಲ್ಲಿ ತಮಿಳರು ಹೆಚ್ಚಾಗಿದ್ದಾರೆ ಎಂಬ ಅಪವಾದದ ಮತು ಕೆಲವೆಡೆ ಹಾದು ಹೋಗಿದ್ದುಂಟು ಆದರೆ ಈ ಊರು ಕನ್ನಡ - ಸಂಸ್ಕೃತಕ್ಕೆ ಹೆಚ್ಚು ಸ್ಪಂದಿಸಿದೆ ಎಂಬುದಕ್ಕೆ ಊರಿನವರೆಲ್ಲರೂ ಸೇರಿ ಏರ್ಪಡಿಸಿದ್ದ ಕನ್ನಡ ಸಾಹಿತ್ಯ ಸಮ್ಮೇಳನ, ಸಂಸ್ಕೃತೋತ್ಸವ, ಸರ್ವೋದಯ ಸಮ್ಮೇಳನಮ ಸಂರಕ್ಷಣಾ ಸಂಸ್ಥೆ, ಮಿತ್ರವೃಂದ. ಪುತಿನ ಪ್ರಶಸ್ತಿ ಮತ್ತು ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಮುಂತಾದ ಕಾರ್ಯಕ್ರಮಗಳು ಸಾಕ್ಷಿಯಾಗಿವೆ. ಜೊತೆಗೆ ಮೇಲುಕೋಟೆಯ 'ಮೇಲುಕೋಟೆ ಪಂಚೆ' ಹಾಗೂ 'ಪುಳಿಯೋಗರೆ' ಯನ್ನು ನೆನೆಯದಿದ್ದರೆ ನನ್ನ ಮಾತು ಪೂರ್ಣಗೊಳ್ಳದು. ಹೀಗೆ ಊರಿನ ಜೊತೆ ಜೊತೆಯಲ್ಲಿ ಇವೆಲ್ಲ ಹಾಸುಹೊಕ್ಕಾಗಿದೆ.

ಮಂಡ್ಯ ಜಿಲ್ಲೆ ಪತ್ರಿಕೋದ್ಯಮದಲ್ಲಿ ಹೇಗೆ ಹೆಸರು ವಾಸಿಯಾಗಿ ಅನೇಕ ಸಾಧನೆಯನ್ನು ಮಾಡಿದೆಯೋ ಹಾಗೆಯೇ ಅದೇ ಜಿಲ್ಲೆಯ ಮೇಲುಕೋಟೆಯಲ್ಲಿಯೂ ಪತ್ರಿಕೋದ್ಯಮ ಮೆರೆದದ್ದು ಸ್ಮರಣೀಯ. ೧೯೮೨ರಿಂದ ೧೯೦೦ ರವರೆಗೆ ಶ್ರೀ ಆಜಿ ರಾಮಾನುಜ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ 'ಹಿಂದುಮತ ಪ್ರಕಾಶಿತ', ಶ್ರೀ ರಾಮಸ್ವಾಮಿ ಶಲ್ವಯ್ಯಂಗಾರ್ ಸಂಪಾದಿಸಿದ 'ಆರ್ಯ ವಿದ್ಯಾ ಸಂಜೀವಿನಿ' ಇ.ಎಲ್.ಪಿಳ್ಳೈಅವರ 'ಯದುಗಿರಿ', ಅರೆಯರ್ ಶ್ರೀನಿವಾಸ ಅಯ್ಯಂಗಾರವರ 'ಸ್ಥಳೀಯ' ಕೈಬರಹ ಪತ್ರಿಕೆ, ಗೋಮಠಂ ತಿರುನಾರಾಯಣ ಅಯ್ಯಂಗಾರ್ಯರ 'ರಾಮಾಯಣ ಮಹಿಮಾ ದರ್ಶನ' ಜಗ್ಗು ವೆಂಕಟಾಚಾರ್ಯರ 'ಯೋಗಿನಿ' ಬಿ.ವಿ.ನರಸಿಂಹಾಚಾರ್ಯರ 'ಪುನರ್ವಸು', ಎಂ.ಜಿ.ಶಾಮ ಅಯ್ಯಂಗಾರ್ಯರ 'ಸದಾನಂದ ವರ್ಧಿನಿ' ಇ.ವಿ.ಆ.ನ ಶ್ರೀನಿವಾಸ ಅಯ್ಯಂಗಾರ್ ದ್ವಯರ ಸಂಪಾದಕತ್ವದ 'ಯದುಗಿರಿ' ಪ್ರಕಟವಾಗಿ ಮೆರೆದದ್ದು ಇಂದು ಸ್ಮರಣೀಯ. ಕಳೆದ ಕೆಲವು ದಶಕಗಳ ಹಿಂದೆ ಭಕ್ತಿಸುಧಾ ಪ್ರತಿಷ್ಠಾನದಿಂದ 'ಭಗವದ್ವಿಷಯ ದರ್ಶನಂ' ಹಾಗೂ ಸ್ಥಾನಿಕ ಪ್ರಕಾಶನದಿಂದ 'ಯದುಗಿರಿ' ಮಾಸಿಕ ಪತ್ರಿಕೆಗಳು ಪ್ರಕಟವಾಗುತ್ತಿದ್ದು ಅದು ಅನಿವಾರ್ಯ ಕಾರಣದಿಂದ ನಿಂತಿದ್ದುಂಟು.

ಗ್ರಾಮಾಂತರ ಪ್ರದೇಶದಲ್ಲಿರುವ ಮಂದಿಗೆ ಇಂತಹ ಸಂವಾದ ವಿಚಾರ ಸಂಕಿರಣ ಅಗತ್ಯವೆಂದು ಮನಗಂಡೇ ಅಕಾಡೆಮಿ ಇಂತಹ ಕಾರ್ಯಕ್ರಮವನ್ನು ಎಲ್ಲಕಡೆ ಹಮ್ಮಿಕೊಂಡು ಪತ್ರಿಕೋದ್ಯಮವನ್ನು ಬೆಳೆಸುವುದಲ್ಲದೆ, ಪತ್ರಕರ್ತರನ್ನು ಸಮಾಜಮುಖಿಯ ಕಡೆ ಕರೆದೊಯ್ಯುತ್ತಿದೆ. ಇಲ್ಲಿ ಏರ್ಪಡಿಸುತ್ತಿರುವ ಈ ಸಂವಾದದಲ್ಲಿ ಅನೇಕ ಅನುಭವಿ ಪತ್ರಕರ್ತರು, ಪೋಲೀಸ್ ವರಿಷ್ಟರು, ಪತ್ರಕರ್ತರಿಗೆ ಸಾಮಾಜಿಕ ಸಮಸ್ಯೆಗಳನ್ನು, ಅವರ ವೃತ್ತಿ ಕೌಶಲ್ಯವನ್ನು ಹೆಚ್ಚಿಸುವಲ್ಲಿ ತಮ್ಮ ಅನುಭವವನ್ನು ಧಾರೆ ಎರೆಯಲಿದ್ದಾರೆ. ಅವರ ಅನುಭವವನ್ನು ಈ ಸಂವಾದದಲ್ಲಿ ನೀವೆಲ್ಲ ಸಾರ್ಥಕ ಪಡಿಸಿಕೊಂಡರೆ ನಮ್ಮೆಲ್ಲರ ಶ್ರಮ ಸಾರ್ಥಕವಾದಂತೆ ಎಂದು ನಾನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

# ಗಾಂಧೀ ಮತ್ತು ಜಿನ್ನಾ ಮತ್ತು ಚೀನಿ ಯುವಕ ಶಾಂತಿ

– ಜಿ.ಎಸ್.ಜಯದೇವ್

ಇದು ೧೯೨೦ರ ಸಮಯದಲ್ಲಿ ನಡೆದ ಘಟನೆ. ಈ ವೇಳೆಗಾಗಲೇ ಗಾಂಧೀಜಿಯವರನ್ನು 'ಮಹಾತ್ಮ' ಎಂದು ಸಂಭೋಧಿಸುವುದು ರೂಢಿಯಲ್ಲಿತ್ತು. ನಾಗ್ಪುರ್‌ನಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸಭೆ ನಡೆದಿತ್ತು. ಒಂದು ಠರಾವು ಹೊರಡಿಸುವ ವಿಷಯಕ್ಕೆ ಸಂಬಂಧಪಟ್ಟಂತೆ ಮಹಮ್ಮದ್ ಆಲಿ ಜಿನ್ನಾ ಮಾತನಾಡುತ್ತಿದ್ದರು. ಜಿನ್ನಾ ಗಾಂಧೀಜಿಯನ್ನು ಮಹಾತ್ಮ ಎಂದು ಸಂಬೋಧಿಸದೆ ಕೇವಲ ಮಿಸ್ಟರ್ ಗಾಂಧಿ ಎಂದು ಪದೇ ಪದೇ ಸಂಬೋಧಿಸುತ್ತಿದ್ದರು. ಇದರಿಂದ ಕುಪಿತಗೊಂಡ ಮೌಲಾನ ಮಹಮ್ಮದ್ ಆಲಿಯವರು ಜಿನ್ನಾ ಅವರನ್ನು 'ಮಿಸ್ಟರ್'ಗೆ ಬದಲಾಗಿ 'ಮಹಾತ್ಮ' ಪದವನ್ನು ಬಳಸಬೇಕೆಂದು ಒತ್ತಾಯಿಸಿದರು. ಆದರೆ ಜಿನ್ನಾ ಮಿಸ್ಟರ್ ಗಾಂಧಿ ಎಂದೇ ತಮ್ಮ ಮಾತು ಮುಂದುವರೆಸಿದರು. ಸಭಿಕರಲ್ಲಿ ಕೆಲವರು ಕೋಪಗೊಂಡು ಜಿನ್ನಾವರೇ, ಮಹಾತ್ಮ ಎನ್ನಿರಿ, ಇಲ್ಲವಾದರೆ ಕುಳಿತುಕೊಳ್ಳಿ ಎಂದು ಕೂಗಿದರು. ಆಗಿನ ಸಮಿತಿ ಸಭಾಧ್ಯಕ್ಷರಾಗಿದ್ದ ಶ್ರೀ ವಿಜಯರಾಘವಾಚಾರಿಯವರೂ ಸಹ ಜಿನ್ನಾ ಅವರಿಗೆ ತಿಳಿಯ ಹೇಳಿದರು. ಅಲ್ಲದೆ ಸಭಿಕರ ಭಾವನೆಗಳನ್ನು ಗೌರವಿಸುವುದಕ್ಕಾದರೂ ಮಹಾತ್ಮ ಎನ್ನಿ ಎಂದರು. ಆದರೆ ಜಿನ್ನಾ ಮಾತ್ರ ಇದಾವುದಕ್ಕೂ ಬಗ್ಗಲಿಲ್ಲ. ಈ ಸಂದರ್ಭದಲ್ಲಿ ಗಾಂಧೀಜಿಯವರು ತಾವೇ ಎದ್ದು ನಿಂತು ಹೇಳಿದರು. "ನಾನು ಮಹಾತ್ಮನಲ್ಲ, ನಾನೊಬ್ಬ ಸಾಧಾರಣ ಮನುಷ್ಯ. ಜಿನ್ನಾ ಸಾಹೇಬರ ಪದಬಳಕೆಯ ಮೇಲೆ ನಾವು ದಬ್ಬಾಳಿಕೆ ಮಾಡುವುದು ಸರಿಯಲ್ಲ, ನೀವೆಲ್ಲ ಹೀಗೆ ಮಾಡಿದರೆ ಅದರಿಂದ ನಿಮಗೆ ಗೌರವ ಬರುವುದಿಲ್ಲ, ನಾವು ನಿಜವಾದ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ನಮ್ಮ ಭಾವನೆಗಳನ್ನು ಮತ್ತೊಬ್ಬರ ಮೇಲೆ ಹೇರಕೂಡದು. ಅವರು ಆಡುವ ಮಾತಿನಲ್ಲಿ ಅವಹೇಳನಕಾರಿ ಅಂಶಗಳಿದ್ದರೆ ಅದಕ್ಕೆ ಪ್ರತಿಭಟಿಸುವುದು ಸರಿ, ಆದರೆ ಜಿನ್ನಾ ಸಾಹೇಬರ ಮಾತಿನಲ್ಲಿ ಯಾವುದೇ ಅಗೌರವ ಇಲ್ಲ". ಗಾಂಧೀಜಿಯವರ ಈ ಮಾತಿನಿಂದ ಸಭಿಕರೆಲ್ಲಾ ಸುಮ್ಮನಾದರು.

## ಚೀನೀ ಯುವಕನ ಪರಿವರ್ತನೆ

೧೯೨೫ರ ಸುಮಾರಿನಲ್ಲಿ ಗಾಂಧೀಜಿ ಕಲ್ಕತ್ತಾಕ್ಕೆ ಬಂದಿದ್ದರು. ಅವರು ದೇಶಬಂಧು ಚಿತ್ತರಂಜನ್‌ದಾಸ್ ಅವರ ಪ್ರತಿಷ್ಠಾನಕ್ಕಾಗಿ ಹತ್ತು ಲಕ್ಷ ರೂ ಗಳನ್ನು ಸಂಗ್ರಹಿಸುತ್ತಿದ್ದರು. ಇದೇ ಸಮಯದಲ್ಲಿ ಅವರಿಗೆ ಒಬ್ಬ ಚೀನೀ ಯುವಕನಿಂದ ಒಂದು ಕಾಗದ ಬಂದಿತು. ಅವನು ೨೫ ವರ್ಷದ ಯುವ ಕವಿ, ಬರಹಗಾರ. ಠಾಗೋರ್-ಗಾಂಧಿಯಿಂದ ಪ್ರಭಾವಿತನಾಗಿದ್ದ. ಕಲ್ಕತ್ತಾದ ಶಾಂತಿನಿಕೇತನದಲ್ಲಿ ಅಧ್ಯಯನ ಮಾಡುತ್ತಿದ್ದ. ಸರಳ ಹೃದಯದ ಈ ಯುವಕ ಶಾಂತಿನಿಕೇತನದಲ್ಲಿ ಎಲ್ಲರ ಮನಸ್ಸನ್ನೂ ಸೂರೆಗೊಂಡಿದ್ದ. ಆದರೂ ಒಂದು ಸಮಸ್ಯೆ ಹುಟ್ಟಿಕೊಂಡಿತು. ಶಾಂತಿನಿಕೇತನದ ಕೆಲವರಿಗೆ ಇವನೊಬ್ಬ ಬೇಹುಗಾರ ಎಂಬ ಅನುಮಾನವಿತ್ತು. ಈ ಸಂಶಯ ಎಂಬ ರಾಕ್ಷಸನ ಕಾಟ ಇವನಿಗೆ ಸಹಿಲಸದಳವಾಯಿತು. ದುಃಖದಿಂದ ತನ್ನ ಕಷ್ಟವನ್ನು ಹೇಳಿಕೊಂಡು ಗಾಂಧೀಜಿಗೆ ಕಾಗದ ಬರೆದಿದ್ದ. ಗಾಂಧೀಜಿ ಕಲ್ಕತ್ತಾದಲ್ಲೇ ಇದ್ದುದರಿಂದ ತಮ್ಮನ್ನು ಬಂದು ಕಾಣುವಂತೆ ತಿಳಿಸಿ ಪತ್ರವೊಂದನ್ನು ಬರೆದರು.

ಈ ಚೀನೀ ಯುವಕ ಬಂದು ಗಾಂಧೀಜಿಯವರನ್ನು ಭೇಟಿಯಾದ. ಗಾಂಧೀಜಿ ಯುವಕನನ್ನು ನೇರವಾಗಿ ಪ್ರಶ್ನಿಸಿದರು – “ನೋಡು, ಶಾಂತಿನಿಕೇತನದವರೆಲ್ಲ ನನಗೆ ಸ್ನೇಹಿತರು, ಅವರೆಲ್ಲ ಒಳ್ಳೆಯ ಜನ, ಹೊರ ದೇಶದ ಜನರನ್ನು ಅವರು ಯಾವಾಗಲೂ ಸ್ವಾಗತಿಸುತ್ತಾರೆ; ಆದರೆ ನಿನ್ನನ್ನು ಮಾತ್ರ ಏಕೆ ಬೇಹುಗಾರ ಎಂದು ಅನುಮಾನಿಸುತ್ತಾರೆ? ನೀನು ನಿಜವಾಗಿಯೂ ಬೇಹುಗಾರನೇ!’ ಆಗ ಚೀನೀ ಯುವಕ ನಿಸ್ಪೃಹಣೆಯಿಂದ ಉತ್ತರಿಸಿದ – ‘ಹೌದು, ಶಾಂತಿಕೇತನದ ಜನ ನಿಜವಾಗಿಯೂ ಒಳ್ಳೆಯವರೆ. ಆದರೆ ನನ್ನ ಬಗ್ಗೆ ಯಾರೊ ತಪ್ಪಾಗಿ ಹೇಳಿರಬಹುದು.’ ಯುವಕನ ರುಜುತ್ವದ ಬಗ್ಗೆ ಗಾಂಧೀಜಿಗೆ ಯಾವ ಅನುಮಾನವು ಬರಲಿಲ್ಲ. ಯುವಕನ ಸರಳತೆಯಿಂದ ಸಂತೋಷಗೊಂಡ ಗಾಂಧೀಜಿ ಹೇಳಿದರು – ‘ನೀನು ಬೇಹುಗಾರನಲ್ಲ ಎಂದು ದೃಢಪಡಿಸಿ ನಾನು ಶಾಂತಿನಿಕೇತನಕ್ಕೆ ಕಾಗದ ಬರೆಯುತ್ತೇನೆ. ನೀನು ನೆಮ್ಮದಿಯಿಂದ ಶಾಂತಿನಿಕೇತನದಲ್ಲಿ ವಾಸಿಸಬಹುದು’. ಈ ಯುವಕ ಗಾಂಧೀಜಿಯವರ ಭೇಟಿಯಿಂದ ಎಷ್ಟು ಪ್ರಭಾವಿತನಾದನೆಂದರೆ ತಾನು ಶಾಂತಿನಿಕೇತನಕ್ಕೆ ಮರಳುವುದಿಲ್ಲವೆಂದೂ, ಬದಲಿಗೆ ಗಾಂಧೀಜಿಯವರ ಸಾನ್ನಿಧ್ಯದಲ್ಲೇ ವಾಸಿಸಲು ಅವಕಾಶ ಕೊಡಬೇಕೆಂದು ಬೇಡಿಕೊಂಡ, ಗಾಂಧೀಜಿ ಸ್ಪಷ್ಟವಾಗಿ ಹೇಳಿದರು ‘ನೋಡು, ನಮ್ಮ ಆಶ್ರಮ ಶಾಂತಿನಿಕೇತನಕ್ಕಿಂತ ಕಷ್ಟಕರವಾದ ಸ್ಥಳ; ನೀನು ಕೇವಲ ಅಧ್ಯಯನ ಮಾಡುತ್ತ ಕಾಲ ಕಳೆಯಲು ಸಾಧ್ಯವಿಲ್ಲ. ದಿನ ನಿತ್ಯದ ಕೆಲಸಗಳನ್ನು – ದೈಹಿಕ ಶ್ರಮವನ್ನು

ಮಾಡಲೇಬೇಕಾಗುತ್ತದೆ'. ಯುವಕ ಹೇಳಿದ– 'ನಾವು ಚೀನೀಯರು ಶ್ರಮಜೀವಿಗಳು, ಕಷ್ಟಪಟ್ಟು ಕೆಲಸ ಮಾಡಲು ನಾನೆಂದೂ ಹೆದರುವವನಲ್ಲ.' ಗಾಂಧೀಜಿ ಅನುಮತಿ ಕೊಟ್ಟರು. ಆದರೆ ಅವನ ಚೀನೀ ಹೆಸರು ಉಚ್ಚರಿಸಲು ಕಷ್ಟವಾಗುತ್ತಿತ್ತು. ಹಾಗಾಗಿ ಅವನಿಗೆ 'ಶಾಂತಿ' ಎಂದು ಹೆಸರಿಟ್ಟರು. ಶಾಂತಿ ಈಗ ಸಬರಮತಿ ಆಶ್ರಮಕ್ಕೆ ಹೋಗಿ ವಾಸಿಸಲಾರಂಭಿಸಿದ. ಅವನು ಈ ಆಶ್ರಮದಲ್ಲಿ ಇರುವವರೆಗೆ 'ಶಾಂತಿ' ನಾಮಧೇಯನಾಗಿಯೇ ಉಳಿದ. ಶಾಂತಿ ಎಂದಿನಂತೆ ಹಸನ್ಮುಖಿಯಾಗಿ, ಸರಳವಾಗಿ ಎಲ್ಲರೊಡನೆ ಬೆರೆಯುತ್ತಿದ್ದ; ಬಹಳ ಬೇಗ ಸಬರಮತಿ ಆಶ್ರಮವಾಸಿಗಳ ಕಣ್ಮಣಿಯಾಗಿ ಬಿಟ್ಟ. ವಿಶೇಷವಾಗಿ ಮಕ್ಕಳ ಮಧ್ಯೆ ವಿನೋದದಿಂದ ಬೆರೆಯುತ್ತಿದ್ದ. ಜೊತೆಗೆ ಶಾಂತಿ ಕಷ್ಟ ಸಹಿಷ್ಣು. ಅಡಿಗೆ ಮನೆಗೆ ನೀರು ಹೊತ್ತು ತರುವುದು; ಪಾತ್ರೆಗಳನ್ನು ಉಜ್ಜಿ ತೊಳೆಯುವುದು. ಅನಂತರ ಅಧ್ಯಯನದಲ್ಲಿ ತೊಡಗುವುದು ಇವನ ದಿನಚರಿಯಾಯಿತು. ಚರಕದಲ್ಲಿ ನೂಲು ತೆಗೆಯುವುದನ್ನೂ ಬಹಳ ಬೇಗ ಕಲಿತುಬಿಟ್ಟ.

ಈ ವೇಳೆಯಲ್ಲಿ ಅವನಿಗೆ ಗಾಂಧೀ ಸಾಹಿತ್ಯವನ್ನು ಅಧ್ಯಯನ ಮಾಡಲು ಅವಕಾಶ ಸಿಕ್ಕಿತು. ಬಹುಶಃ ಗಾಂಧೀಜಿಯವರ ಸತ್ಯಸಂಧತೆ ಅವನ ಅಂತರಾತ್ಮವನ್ನು ಕಲಕಿರಬೇಕು: ಈ ವರೆಗೂ ಅರಿಯದ ಪ್ರಾಮಾಣಿಕ ಬದುಕಿನ ಹೊಸ ಆಯಾಮಗಳ ಸಾಧ್ಯತೆಯನ್ನೂ ಅವನು ಮನಗಂಡಿರಬೇಕು. ತನ್ನ ಹಿಂದಿನ ಜೀವನದ ಘಟನೆಗಳನ್ನೆಲ್ಲಾ ಸ್ಮರಿಸಿಕೊಂಡು ಬರೆಯಲಾರಂಭಿಸಿದ. ದಿನದಿಂದ ದಿನಕ್ಕೆ ಪುಟಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಮನಸ್ಸನ್ನು ತೊಳೆಯುವುದು ಎಂದರೆ ಅದನ್ನು ಮೊದಲು ತೆರೆದಿಡುವುದಲ್ಲವೆ? ಗಾಂಧೀಜಿ ಸಾನ್ನಿಧ್ಯದಲ್ಲಿ ಅವನಿಗೆ ಈ ಅವಕಾಶ ದೊರೆಯಿತು. ತನ್ನ ಚರಿತ್ರೆಯನ್ನು ಕೈಯಲ್ಲಿ ಹಿಡಿದು ಗಾಂಧೀಜಿಯ ಕೊಠಡಿಗೆ ಹೋಗಿ, ಅದನ್ನು ಅವರ ಕೈಗೆ ಕೊಟ್ಟು ಹೇಳಿದ – 'ಗಾಂಧೀಜಿ, ನಾನು ಭಾರತಕ್ಕೆ ಬರುವ ಮೊದಲು ಸಿಂಗಪೂರ್‌ನಲ್ಲಿ ಎಲ್ಲ ಚೀನೀ ಯುವಕರಂತೆ ಕೆಟ್ಟ ಜೀವನ ನಡೆಸಿದ್ದೆ. ಈಗ ನನ್ನೊಳಗೆ ಏನೋ ತುಮುಲ ಎದ್ದಿದೆ. ನನ್ನ ಮನಸ್ಸನ್ನು ನಿಮ್ಮೆದುರು ತೆರೆದಿಡಬೇಕು ಎನ್ನಿಸಿದೆ. ಇದರಲ್ಲಿ ಎಲ್ಲವನ್ನೂ ಬರೆದಿದ್ದೇನೆ. ದಯಮಾಡಿ ಇದನ್ನು ಓದಿ. ಅಷ್ಟೇ ಅಲ್ಲ, ನನ್ನ ಅಂತರಂಗದ ಪರಿಶುದ್ಧಿಗಾಗಿ ನಾನು ಹತ್ತು ದಿನದ ಉಪವಾಸ ಮಾಡಬೇಕೆಂದು ನಿರ್ಧರಿಸಿದ್ದೇನೆ; ದಯವಿಟ್ಟು ಅನುಮತಿ ಕೊಡಿ'.

ಯುವಕ ಕೊಟ್ಟ ದೊಡ್ಡ ಕಡತದ ಕಡೆ ನೋಡಿ ಗಾಂಧೀಜಿ ಹೇಳಿದರು – 'ನೀನು ಕೊಟ್ಟಿರುವ ಈ ಬರಹ ಬಹಳ ದೊಡ್ಡದಾಗಿದೆ, ಅದನ್ನು ಓದಲು ತುಂಬಾ ಸಮಯ ಹಿಡಿಯುತ್ತದೆ. ಆದರೂ ಅದನ್ನು ನಾನು ಓದುತ್ತೇನೆ. ನಾನು

ಹೇಳುವವರೆಗೆ ಉಪವಾಸ ಕೈಗೊಳ್ಳಬೇಡ. ನೀನು ಬರೆದಿರುವುದನ್ನು ಓದಿದ ನಂತರ ನಿನ್ನ ಅವಶ್ಯಕತೆ ಏನು, ನೀನು ಏನನ್ನು ಹುಡುಕುತ್ತಿದ್ದೀಯ ಎಂದು ನನಗೆ ತಿಳಿಯುತ್ತದೆ. ಅನಂತರ ನಾನು ಉಪವಾಸಕ್ಕೆ ಅನುಮತಿ ಕೊಡುತ್ತೇನೆ'. ಮತ್ತೆ ಹೇಳಿದರು – 'ಉಪವಾಸ ಎನ್ನುವುದು ಒಂದು ಪವಿತ್ರ ವ್ರತ. ಅದನ್ನು ಸಿಕ್ಕ ಸಿಕ್ಕದ್ದಕ್ಕೆಲ್ಲಾ ಬಳಸಬಾರದು. ಆ ವ್ರತ ಆಚರಿಸುವ ಮೊದಲು ನಾವು ಅದಕ್ಕೆ ತಕ್ಕ ಯೋಗ್ಯತೆ ಪಡೆಯಬೇಕು'. ಅನಂತರ ಗಾಂಧೀಜಿ ಚೀನೀ ಯುವಕನ ಚರಿತ್ರೆಯನ್ನು ಓದಿದರು. ಶಾಂತಿಯ ಸತ್ಯ ನಿಷ್ಠೆಯ ಬಗ್ಗೆ ಅವರಿಗೆ ಮೆಚ್ಚುಗೆಯಾಯಿತು. ಅವನು ಪರಿವರ್ತನೆಯ ಹಾದಿಯಲ್ಲಿರುವುದು ಸ್ಪಷ್ಟವಾಯಿತು. ಶಾಂತಿಗೆ ಹತ್ತು ದಿನಗಳ ಉಪವಾಸ ಮಾಡಲು ಅನುಮತಿ ನೀಡಿದರು. ಹತ್ತು ದಿನದ ಉಪವಾಸ ಹುಡುಗಾಟವಲ್ಲ. ಆದರೆ ಶಾಂತಿ ಧೈರ್ಯವಾಗಿ ತನ್ನ ಉಪವಾಸ ಮುಂದುವರೆಸಿದ. ಪ್ರತಿ ದಿನ ಗಾಂಧೀಜಿ ಶಾಂತಿಯ ಕೊಠಡಿಗೆ ಹೋಗಿ ವಿಚಾರಿಸುತ್ತಿದ್ದರು. ಹತ್ತು ಹದಿನೈದು ನಿಮಿಷಗಳ ಕಾಲ ಅವನೊಡನೆ ಮಾತನಾಡುತ್ತಿದ್ದರು. ಶಾಂತಿ ಹತ್ತು ದಿನಗಳ ಉಪವಾಸದ ನಂತರ ಗಾಂಧೀಜಿಯವರ ಎದುರಿಗೆ ಕೆಲವು ಪ್ರತಿಜ್ಞೆಗಳನ್ನು ಕೈಗೊಂಡ. ಬಹುಶಃ ತನ್ನ ಭವಿಷ್ಯ ಜೀವನದಲ್ಲಿ ನಡೆದುಕೊಳ್ಳುವ ಬಗ್ಗೆ ಈ ಪ್ರತಿಜ್ಞೆಗಳನ್ನು ಕೈಗೊಂಡಿರಬೇಕು. ಈ ಪ್ರತಿಜ್ಞೆಗಳನ್ನು ಹಾಳೆಗಳಲ್ಲಿ ಎರಡು ನಕಲುಗಲಾಗಿ ಬರೆಯಲಾಯಿತು. ಪ್ರತಿಜ್ಞಾ ಪತ್ರಕ್ಕೆ ಶಾಂತಿ ಸಹಿ ಹಾಕಿದ, ಗಾಂಧೀಜಿ ಸಾಕ್ಷಿಯಾಗಿ ಸಹಿ ಮಾಡಿದರು. ಒಂದು ಪ್ರತಿಯನ್ನು ಗಾಂಧೀಜಿಗೆ ಕೊಟ್ಟು, ಮತ್ತೊಂದನ್ನು ಶಾಂತಿ ತೆಗೆದುಕೊಂಡ. ಸ್ವದೇಶಕ್ಕೆ ಮರಳಿದ ಮೇಲೆ ಈ ಚೀನೀ ಯುವಕ ಒಂದು ಪತ್ರಿಕೆ ಹೊರಡಿಸಿದ ಅದಕ್ಕೆ ಸಂಪಾದಕೀಯವನ್ನು ಬರೆದು ಕೆಳಗೆ 'ಶಾಂತಿ' ಎಂದು ಸಹಿ ಮಾಡುತ್ತಿದ್ದ. ಈ ಪತ್ರಿಕೆಯ ಮೂಲಕ ಗಾಂಧೀಜಿಯನ್ನು ಚೀನೀಯರಿಗೆ ಪರಿಚಯಿಸಿದ.

## ಸನ್ಮಾನ್ಯರಿಂದ

ಈ ಪತ್ರದೊಂದಿಗೆ 'ಜನಪದ ವಿಚಾರ'ದ ಚಂದಾಹಣಕ್ಕಾಗಿ ರೂ.೧೦೦೦=೦೦(ರೂಪಾಯಿ ಒಂದು ಸಾವಿರ) ರ ಚೆಕ್ ಕಳುಹಿಸುತ್ತಿದ್ದೇನೆ. ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ ಎಂಬ ವಿಚಾರ ತಿಳಿದಿದೆ. ಪತ್ರಿಕೆ ವಿಚಾರ ಪೂರ್ಣವಾಗಿ ಹೊರಬರುತ್ತಿದೆ. ಇದು ಹೀಗೆಯೇ ಮುಂದುವರಿಯುತ್ತಾ ಸಾಗಲಿ. ತಮ್ಮ ಸೇವಾ ಸಂಸ್ಥೆಯಾದ ಜನಪದ ಸೇವಾ ಟ್ರಸ್ಟ್‌ಗೂ ನನ್ನ ಹಾರ್ದಿಕ ಅಭಿನಂದನೆಗಳು.

ಬೆಂಗಳೂರು — ಕೆ.ಮೋಹನ್ ದೇವ್ ಆಳ್ವ

# ಸಂತಾಪ

ಸರ್ವ ಸೇವಾ ಸಂಘದ ಕಾರ್ಯದರ್ಶಿಯು, ರಾಷ್ಟ್ರೀಯ ಲೋಕ ಸಮಿತಿಯ ಉಪಾಧ್ಯಕ್ಷರು, "ಭೂಮಿಪುತ್ರ"ದ ಸಂಪಾದಕರು, ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಸನ್ಮಾನಿತರು, ಹಿರಿಯ ಸರ್ವೋದಯ ಕಾರ್ಯಕರ್ತರಾಗಿದ್ದ ವಿನೋಬಾಭಾವೆ ಮತ್ತು ಜಯಪ್ರಕಾಶ್ ನಾರಾಯಣರ ಸಂಗಡಿಗರಾಗಿದ್ದ ಹಾಗೂ 'ನಿರ್ಭಯ' ಪತ್ರಿಕಾ ಪ್ರಶಸ್ತಿಯನ್ನು ಪಡೆದಿದ್ದ ಗುಜರಾತಿನ ಗಾಂಧಿವಾದಿ ಚುನಿಭಾಯಿ ವೈದ್ಯ ಕಳೆದ ಡಿಸೆಂಬರ್ ೧೯ರಂದು ನಿಧನರಾದರು. ಅವರಿಗೆ ೯೨ ವರ್ಷವಾಗಿತ್ತು. ಚುನಿಭಾಯಿ ವೈದ್ಯರಿಗೆ ಗೌರವಪೂರ್ಣ ಅಶ್ರುಗಳು.

******

ಕರ್ನಾಟಕದ ಸಕ್ರಿಯ ಸರ್ವೋದಯ ಕಾರ್ಯಕರ್ತರು ಮತ್ತು ತಮ್ಮ ಜೀವನವನ್ನು ಸರ್ವೋದಯು ಕಾರ್ಯಕ್ಕೆ ಅರ್ಪಿಸಿದವರು ಅಗಿದ್ದ ಅಶ್ವತ್ಥನಾರಾಯಣಗೌಡರು ತೀರಿಕೊಂಡರು. ಅವರಿಗು ಜನಪದ ವಿಚಾರದ ಅಶ್ರುಗಳು.

******

ಉತ್ತರ ಪ್ರದೇಶ ಗೋವಿಂದಪುರ ಜಿಲ್ಲೆಯ ಬನವಾಸಿ ಸೇವಾ ಆಶ್ರಮದ ಡಾ.ರಾಗಿನಿ ಪ್ರೇಮ್ ನವೆಂಬರ್ ೨ರಂದು ನಿಧನರಾದರು. ಉಸ್ಮಾನಿಯ ಯುನಿವರ್ಸಿಟಿಯಿಂದ ಡಾಕ್ಟರೇಟ್ ಪಡೆದು ಡಾ.ಸುಶೀಲ ನಯ್ಯರ್‌ರವರ ಜೊತೆಗೆ ಸೇವಾ ಗ್ರಾಮದಲ್ಲಿ ಕೆಲಸ ಮಾಡಿದರು. ಅವರನ್ನು ಜಮ್ನಾಲಾಲ್ ಬಜಾಜ್ ಪ್ರಶಸ್ತಿ ಮತ್ತು ಇಂದಿರಾಗಾಂಧಿ ಪ್ರಶಸ್ತಿಗಳಿಂದ ಸನ್ಮಾನಿಸಲಾಗಿತ್ತು. ಇವರ ಇಡೀ ಜೀವನ ಗ್ರಾಮ ಸ್ವರಾಜ್ಯದ ಸ್ಥಾಪನೆ ಮತ್ತು ಕಾರ್ಯಕರ್ತರ ಬೆಳವಣಿಗೆಗಾಗಿ ಸಮರ್ಪಿಸಲಾಗಿತ್ತು.

## ಸುಭಾಷಿತ

ಜೀವನದ ಗುರಿ ಆನಂದ, ಧನವಲ್ಲ. ಉಚಿತ ಮಾರ್ಗದಿಂದ ಸಂಪಾದಿಸಿದ ಧನ ಕೂಡ ಆನಂದದ ಸಾಧನವಾಗಬಲ್ಲದು. ಲೂಟಿ ಮಾಡುವ ವೃತ್ತಿಯಿಂದ ಧನ ಸಂಪಾದಿಸುವುದು ಸಾಮಾಜಿಕ ಮತ್ತು ಆಧ್ಯಾತ್ಮಿಕ ಆನಂದದ ಅಡಿಪಾಯವನ್ನೇ ಕಿತ್ತೆಸೆಯುತ್ತದೆ. ಈ ತರಹದ ಧನ, ಧನವಲ್ಲ ಅದು ನಿಧನ(ವಿನಾಶವೇ) ಸರಿ.

– ವಿನೋಭ

# ಜನಪದ ಸೇವಾ ಟ್ರಸ್ಟ್ ಸಮಾಚಾರ

ಹೆಗ್ಗೋಡಿನ ಪ್ರಸನ್ನರವರಿಗೂ ಜನಪದ ಸೇವಾ ಟ್ರಸ್ಟಿಗೂ ವೈಚಾರಿಕ ಮತ್ತು ಕ್ರಿಯಾತ್ಮಕ ಸಂಬಂಧವಿದೆ ಅವರು ಆಗಾಗ್ಗೆ ಟ್ರಸ್ಟಿಗೆ ಭೇಟಿ ಕೊಡುತ್ತಾರೆ. ಅವರು ಇತ್ತೀಚೆಗೆ ಟ್ರಸ್ಟಿಗೆ ಬಂದಿದ್ದರು.

******

ಬೆಂಗಳೂರಿನಲ್ಲಿ ನಡೆದ ದತ್ತು ಕೇಂದ್ರಗಳ ಸಂಚಾಲಕರ ಸಭೆ ನಡೆಯಿತು. ಅದರಲ್ಲಿ ಸಂತೋಷ್ ಕೌಲಗಿಯವರು ಭಾಗವಹಿಸಿದರು.

******

ಮಂಡ್ಯ ನಗರದಲ್ಲಿರುವ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಟ್ರಸ್ಟಿಗೆ ಬೇಟಿ ಕೊಟ್ಟು ಪ್ರಚಲಿತ ವಿಷಯಗಳ ಬಗ್ಗೆ ಸಂವಾದ ನಡೆಸಿದರು.

******

ಕಳೆದ ಫೆಬ್ರವರಿ ೭ರಂದು ಟ್ರಸ್ಟಿನ ಆವರಣದಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿ ಮತ್ತು ಖಾದ್ರಿ ಶಾಮಣ್ಣ ಟ್ರಸ್ಟ್ ಆಶ್ರಯದಲ್ಲಿ ಕಾರ್ಯನಿರತ ಪತ್ರಿಕಾಕರ್ತರಿಗೆ ವೃತ್ತಿ ಕೌಶಲ್ಯ ಶಿಬಿರ ನಡೆಯಿತು.

******

ದತ್ತು ಕೇಂದ್ರಕ್ಕೆ ಒಂದು ದಿನದ ಗಂಡು ಮಗು ಸೇರ್ಪಡೆಗೊಂಡಿತು. ಮಗುವಿನ ಆರೋಗ್ಯ ಸ್ಥಿರವಾಗಿದೆ.

******

ಹೊಸ ಜೀವನ ದಾರಿಯಲ್ಲಿ ಜಮ್ನಾಲಾಲ್ ಬಜಾಜ್ ಟ್ರಸ್ಟ್ ಧನಸಹಾಯದಿಂದ ಹೊಸ ಜೀವನ ದಾರಿ ಕೇಂದ್ರದಲ್ಲಿ ನಿರ್ಮಿಸಲಾಗುತ್ತಿರುವ ಬಹು ಉದ್ದೇಶಿತ ಕಟ್ಟಡದ ಕೆಲಸ ಪ್ರಾರಂಭವಾಯಿತು.

******

ತುಮಕೂರಿನಿಂದ ಶ್ರೀ.ಕೃಷ್ಣಶಾಸ್ತ್ರಿ ಮತ್ತು ಬಂಧುಗಳು ಬಂದು ಹೋದರು. ಕೋಟಗಾನಹಳ್ಳಿ ರಾಮಯ್ಯ ಮತ್ತು ಅವರ ಪತ್ನಿ ರಾಜೇಶ್ವರಿ ಬಂದು ಹೋದರು. ಬಳ್ಳಾರಿಯಲ್ಲಿರುವ ಟ್ರಸ್ಟ್ ಅಭಿಮಾನಿ ವಿಠಲ್ ಮತ್ತು ಶೈಲಜಾರವರು ಬಂದು ಹೋದರು. ಇಂಗ್ಲೆಂಡ್‌ನಲ್ಲಿರುವ ಟ್ರಸ್ಟಿನ ಅಭಿಮಾನಿ ಮತ್ತು ದಾನಿ ಶ್ರೀ.ರಾಮಮೂರ್ತಿ, ಸೀತಾ ರಾಮಮೂರ್ತಿ ಹಾಗೂ ಅವರ ಮಗಳು ಜ್ಯೋತ್ಸ್ನ ಹಾಗೂ ಅವರ ಮೊಮ್ಮಕ್ಕಳು ಹಾಗೂ ಅವರ ಇಂಗ್ಲಿಷ್ ಅಳಿಯ ಭೇಟಿ ಕೊಟ್ಟರು.

# ಜನಪದ ನಿಲಯದ ಅಂತರಂಗದಲ್ಲಿ – ೧೩೧



ನಿನ್ನೆ ಸಾವಿರ ರೂಪಾಯಿಗಳ ಮನಿ ಆರ್ಡರ್ ಜನಪದ ಸೇವಾ ಟ್ರಸ್ಟ್ ಹೆಸರಲ್ಲಿ ಬಂದಿತು. ಅದನ್ನು ಸ್ವೀಕರಿಸಿ ಹಸ್ತಾಕ್ಷರ ಮಾಡುತ್ತಿದ್ದಾಗ ಟ್ರಸ್ಟ್ ಬಗ್ಗೆ ಅಭಿಮಾನ ಮತ್ತು ಪ್ರೀತಿ ಇಟ್ಟ ಅನೇಕಾನೇಕ ವ್ಯಕ್ತಿಗಳು ಮಾಡಿದ ಸಹಾಯ ನೆನಪಾಗುತ್ತಾ ಹೋಯಿತು. ೧೯೭೦ರ ದಶಕದಲ್ಲಿ ಅಂತರರಾಷ್ಟ್ರೀಯ ಅಂಗವಿಕಲ ದಿನಾಚರಣೆಯ ಸಂದರ್ಭದಲ್ಲಿ ಕನ್ನಡದ ಜನಪ್ರಿಯ ವಾರಪತ್ರಿಕೆ 'ಸುಧಾ' ತನ್ನ ಮುಖಪುಟದ ಮೇಲೆ ಟ್ರಸ್ಟಿನ ಓರ್ವ ಅಂಗವಿಕಲ ವಿದ್ಯಾರ್ಥಿ ಆಗುಂಬೆಯ ಸುರೇಶನ ಚಿತ್ರವನ್ನು ಪ್ರಕಟಿಸಿ ಅಂಗವಿಕಲ ಮಕ್ಕಳ ಸೇವಾ ಕೇಂದ್ರವಾಗಿದ್ದ 'ಕರುಣಾಗೃಹ' ದ ಪರಿಚಯವನ್ನು ಪತ್ರಿಕೆಯಲ್ಲಿ ತಿಳಿಸಿದ ಮೇಲೆ ರಾಜ್ಯದ ಮೂಲೆ ಮೂಲೆಗಳಿಂದ ಸಣ್ಣ ಮತ್ತು ದೊಡ್ಡ ಪ್ರಮಾಣದಲ್ಲಿ ಧನ ಸಹಾಯ ಹರಿದು ಬರಲಾರಂಭಿಸಿತು. ಧನ ಸಹಾಯ ಕಳುಹಿಸಿದವರಲ್ಲಿ ಬಡ ಕೂಲಿಕಾರರಿಂದ ಹಿಡಿದು ಪ್ರತಿಷ್ಠಿತ ವ್ಯಕ್ತಿಗಳಿಂದಲೂ ಬರಲಾರಂಭಿಸಿತು. ಸುಧಾದಲ್ಲಿ ಕರುಣಾಗೃಹದ ಬಗ್ಗೆ ಪರಿಚಯಾತ್ಮಕ ಲೇಖನ ಬರುವ ಮೊದಲೇ ಜನಪದ ಸೇವಾ ಟ್ರಸ್ಟ್ ಪ್ರಾರಂಭವಾಗಿ ಹಲವಾರು ವರ್ಷಗಳಾಗಿದ್ದವು. ದಾನಿಗಳಲ್ಲಿ ಹಲವಾರು ಪ್ರಕಾರದವರಿದ್ದರು. ಪ್ರತಿ ತಿಂಗಳು ಕೇವಲ ೨ರೂಪಾಯಿಗಳನ್ನು ಕಳುಹಿಸುವವರು ಕೆಲವರಿದ್ದರೆ ಇನ್ನೂ ಕೆಲವರು ೧೦, ೧೫, ೨೫, ೫೦, ೧೦೦ ಈ ಮೊತ್ತದಲ್ಲಿ ಸ್ವಯಂ ಪ್ರೇರಣೆಯಿಂದ ಸಹಾಯ ಮಾಡುವವರಿದ್ದರು. ಎಷ್ಟೇ ಸಣ್ಣ ಮೊತ್ತದ ಧನ ಸಹಾಯವಿದ್ದರೂ ಅದನ್ನು ಅವರು ತಮ್ಮ ಜೀವಿತಾವಧಿಯವರೆಗೆ ಕಳುಹಿಸಿದ್ದಾರೆ. ಅಂಥವರಲ್ಲಿ ಆಂಥೋಣಿ ದಾಸ್ ಒಬ್ಬರು. ಪ್ರತಿ ತಿಂಗಳೂ ತಪ್ಪದೇ ೨೦೦ ರೂಪಾಯಿಗಳನ್ನು ಕೆಲವೊಂದು ಸಲ ಇನ್ನೂ ಹೆಚ್ಚಿನ ಮೊಬಲಗನ್ನು ಕಳುಹಿಸುತ್ತಿದ್ದರು. ಈಗ್ಗೆ ಕೆಲವು ವರ್ಷಗಳ ಹಿಂದೆ ಆಂಥೋಣಿ ದಾಸ್ ತೀರಿಕೊಂಡರು. ಆದರೆ ಅವರ ಮಗಳು ಸುಜಾತ ಮತ್ತು ಪತ್ನಿ ಜೋಸೆಫಿನ್ ಮೇರಿ ಪ್ರತಿ ತಿಂಗಳು ಧನ ಸಹಾಯವನ್ನು ಕಳುಹಿಸುತ್ತಾ ಬರುತ್ತಿದ್ದಾರೆ. ಆಂಥೋಣಿ ದಾಸ್ ಮತ್ತು ಅವರ ಕುಟುಂಬದವರ ಈ ಸಹಾಯವನ್ನು ಮರೆಯಲು ಸಾಧ್ಯವಿಲ್ಲ. ಇದೇ ರೀತಿ ದಾವಣಗೆರೆಯ ಶ್ರೀಧರಮೂರ್ತಿ, ಬೆಂಗಳೂರಿನ ಜಾನ್ ಮುಂತಾದವರ ಹೆಸರು ಜ್ಞಾಪಕಕ್ಕೆ ಬರುತ್ತದೆ. ವಿಶೇಷವೆಂದರೆ ಆ ದಾನಿಗಳು ತೀರಿಕೊಂಡ ಮೇಲೆ ಅವರ ಮಕ್ಕಳು ಅಥವಾ ಹತ್ತಿರದ ಸಂಬಂಧಿಗಳು ಸಹಾಯವನ್ನು ಸಲ್ಲಿಸುತ್ತಾ ಬಂದಿದ್ದಾರೆ. ಅಂಥವರಲ್ಲಿ ನಿನ್ನೆ ೧,೦೦೦ ರೂಪಾಯಿ ಕಳುಹಿಸಿದ್ದ ಕ್ಷಮಾ ಕಟ್ವಾರ್ ಒಬ್ಬರು. ಕ್ಷಮಾನ ತಂದೆ ಆರ್.ಎಸ್.ತಡಕೋಡ್ ಮೈಸೂರಿನ

ಎನ್.ಐ.ಇ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಅಧ್ಯಾಪಕರಾಗಿದ್ದರು. ಅವರು ಟ್ರಸ್ಟಿನ ಸೇವಾ ಕಾರ್ಯದ ಬಗ್ಗೆ ಕೇಳಿ ಸ್ವತಃ ಕಣ್ಣಾರೆ ನೋಡಿ ತಿಳಿದುಕೊಳ್ಳಲು ಮೇಲುಕೋಟೆಗೆ ಬಂದರು. ತಮ್ಮ ಸಾಮಾಜಿಕ ವಿಷಯದ ಬಗ್ಗೆ ಇರುವ ಕಳಕಳಿಯಿಂದ ಟ್ರಸ್ಟಿನ ಸೇವಾಕಾರ್ಯಗಳನ್ನು ವೀಕ್ಷಿಸಿದರು. ಆನಂತರದಿಂದ ಅವರು ಟ್ರಸ್ಟಿನ ಅಭಿಮಾನಿ ಸ್ವಯಂಸೇವಕರಾದರು. ಪ್ರತಿ ತಿಂಗಳೂ ೧೦೦ರೂಪಾಯಿ ಕಳುಹಿಸುವುದರ ಜೊತೆಗೆ ಸಮಯಾವಕಾಶ ಸಿಕ್ಕಾಗಲೆಲ್ಲ ಅವರು ಮೇಲುಕೋಟೆಗೆ ಬಂದು ಕರುಣಾಗೃಹದ ಅಂಗವಿಕಲ ಮಕ್ಕಳ ಜೊತೆ ಆಡುವುದು ಮತ್ತು ತೋಟದ ಕೆಲಸ ಮಾಡುವುದು ಇತ್ಯಾದಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಮೇಲುಕೋಟೆಯಿಂದ ೬ಕಿಲೋಮೀಟರ್ ದೂರವಿರುವ 'ಹೊಸ ಜೀವನ ದಾರಿ' ಕೇಂದ್ರಕ್ಕೆ ನಡೆದುಕೊಂಡು ಹೋಗಿ ಅಲ್ಲಿ ಪ್ರೌಢ ಅಂಗವಿಕಲ ಮಕ್ಕಳು ಕಟ್ಟುತ್ತಿದ್ದ ಮಣ್ಣಿನ ಮನೆಯ ಕೆಲಸದಲ್ಲಿ ಭಾಗಿಯಾಗುತ್ತಿದ್ದರು. ಕೆಲವೊಮ್ಮೆ ತಮ್ಮ ಜೊತೆಗೆ ತಮ್ಮ ಸಹ ಅಧ್ಯಾಪಕರನ್ನು ಕರೆದುಕೊಂಡು ಬರುತ್ತಿದ್ದರು. ೧೯೯೦ ಏಪ್ರಿಲ್‌ನಲ್ಲಿ ಜನಪದ ಸೇವಾ ಟ್ರಸ್ಟ್ ಮೇಲುಕೋಟೆಯಲ್ಲಿ ಆಯೋಜಿಸಿದ್ದ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನದ ವ್ಯವಸ್ಥೆ ಮಾಡುವಲ್ಲಿ ತಡಕೋಡ್‌ರವರು ಸಕ್ರಿಯ ಪಾತ್ರವಹಿಸಿದ್ದರು. ನಿರಾಡಂಬರ, ಸಜ್ಜನ ಮತ್ತು ಸುಶೀಲ ವ್ಯಕ್ತಿತ್ವದ ತಡಕೋಡ್‌ರವರು ಸಮ್ಮೇಳನದ ಕಾಲದಲ್ಲಿ ಎಂಥ ಕಷ್ಟಕ್ಕೂ ಸಿದ್ಧವಾಗಿದ್ದರು. ಆ ದಿನಗಳಲ್ಲಿ ಮತ್ತು ಬೇರೆ ಸಮಯದಲ್ಲಿ ಅವರು ಮೇಲುಕೋಟೆಗೆ ಬಂದು ನಮ್ಮೆಲ್ಲರೊಂದಿಗೆ ನಮ್ಮವರಾಗಿ ಓಡಾಡಿ ಕೆಲಸಮಾಡಿದ್ದು ಜ್ಞಾಪಕದಲ್ಲಿದೆ. ಮೈಸೂರು ನಗರದ ಕುವೆಂಪು ಬಡಾವಣೆಯಲ್ಲಿ ಅವರ ಮನೆಯಿತ್ತು. ಆ ಬಡಾವಣೆ ಆಗ ತಾನೆ ರೂಪುಗೊಳ್ಳುತ್ತಿತ್ತು. ಅಲ್ಲೊಂದು – ಇಲ್ಲೊಂದು ಮನೆಗಳಿದ್ದವು. ರಸ್ತೆಗಳ ನಿರ್ಮಾಣವಾಗುತ್ತಿತ್ತು. ದೀಪ ಮತ್ತು ನೀರಿನ ವ್ಯವಸ್ಥೆ ಇನ್ನೂ ಸರಿಯಾಗಿರಲಿಲ್ಲ. ಬಡಾವಣೆಯ ನಿರ್ಮಾಣದ ಹೊಸತರಲ್ಲಿ ತಡಕೋಡ್‌ರವರು ಆ ಪ್ರದೇಶದ ವಾಸಿಗಳ ನಾಗರಿಕ ಸಮಿತಿಯನ್ನು ರಚಿಸಿ ಅಲ್ಲಿಯ ನಿವಾಸಿಗಳ ತೊಂದರೆಯನ್ನು ನಗರ ನಿರ್ಮಾಣ ಸಮಿತಿಗೆ ತಿಳಿಸಿ ಹೋರಾಡುತ್ತಿದ್ದರು ಮತ್ತು ಎಲ್ಲರಿಗೂ ನಾಗರೀಕ ಸೌಕರ್ಯಗಳು ದೊರೆಯುವಂತೆ ಮಾಡುತ್ತಿದ್ದರು. ರಸ್ತೆಗಳ ನಿರ್ಮಾಣ, ನಗರ ಬಸ್ ಸಂಚಾರ ಮುಂತಾದವುಗಳನ್ನು ಏರ್ಪಾಟು ಮಾಡಿದರು. ಆದರೆ ಅವರಿಗೆ ಹೃದಯಾಘಾತವಾಗಿ ಮಧ್ಯವಸ್ಸಿನಲ್ಲಿಯೇ ತೀರಿಕೊಂಡರು. ಹೆಂಡತಿ, ಮಗಳು ಮತ್ತು ಮಗನನ್ನು ಬಿಟ್ಟು ಅಗಲಿದರು. ಅವರ ಸೇವಾಪರಂಪರೆಯನ್ನೇ ಅವರ ಮಗಳಾದ ಕ್ಷಮಾ ಮುಂದುವರೆಸಿಕೊಂಡು ಬರುತ್ತಿದ್ದಾರೆ. ತಂದೆ ಟ್ರಸ್ಟಿಗೆ ನೆರವಾಗುತ್ತಿದ್ದ ರೀತಿಯಲ್ಲಿಯೇ ಕ್ಷಮಾ ಕೂಡ ಧನ ಸಹಾಯದ ಮೂಲಕ ನಿರಂತರವಾಗಿ ನೆರವಾಗುತ್ತಿದ್ದಾಳೆ. ಅಂತರ್‌ಜಾತಿ ಮತ್ತು ಅಂತರ್‌ರಾಜ್ಯ ವ್ಯಕ್ತಿ ಬಂಗಾಳದ ಕಟ್ವಾರ್ ಅವರನ್ನು ಮದುವೆಯಾಗಿ ಮೈಸೂರಿನಲ್ಲಿ ನೆಲೆಸಿದ್ದಾರೆ. ಅವಳಿಗೂ, ಅವಳ ಕುಟುಂಬಕ್ಕೂ ಜನಪದ ಸೇವಾ ಟ್ರಸ್ಟ್ ಶುಭ ಹಾರೈಸುತ್ತದೆ.

# ಖಾದಿ ವಿಚಾರ



ಜನಪದ ಸೇವಾ ಟ್ರಸ್ಟ್ ಖಾದಿ ಉತ್ಪಾದನೆ ಮತ್ತು ಮಾರಾಟದ ಕೆಲಸವನ್ನು ಹಲವಾರು ವರ್ಷಗಳಿಂದ ಅರ್ಪಣಾ ಮನೋಭಾವದಿಂದ ಮಾಡಿಕೊಂಡು ಬರುತ್ತಿದೆ. ಟ್ರಸ್ಟ್ ಗಾಂಧೀ ವಿಚಾರಧಾರಿತ ಸ್ವಯಂ ಸೇವಾ ಸಂಸ್ಥೆಯಾಗಿದೆ. ಗಾಂಧಿ ಎಂಬಲ್ಲಿ ಖಾದಿ ಇರಬೇಕಾದುದು ಸಹಜ. ಅದರಂತೆ ಟ್ರಸ್ಟ್ ಖಾದಿ ಕೆಲಸವನ್ನು ರಚನಾತ್ಮಕ ಕೆಲಸವೆಂದು ಭಾವಿಸಿ ಮಾಡಿಕೊಂಡು ಬರುತ್ತಿದೆ. ಗಾಂಧೀಜಿ ಸೂಚಿಸಿದ್ದ ೧೮ ಪ್ರಕಾರದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಖಾದಿ ಕೂಡ ಒಂದು. ಎಲ್ಲ ರಚನಾತ್ಮಕ ಕಾರ್ಯಗಳು ಜನರ ನೆರವಿನಿಂದ ಸ್ವಯಂ ಸೇವ ಭಾವನೆಯಿಂದ ನಡೆಯುವಂಥವು. ಅವು ಸಾಮಾಜಿಕ ದೌರ್ಬಲ್ಯಗಳ ನಿವಾರಣೆಯ ಸಾಧನಗಳು ಹೌದು ಮತ್ತು ಬದಲಾವಣೆ ತರುವ ಚಕ್ರಗಳೂ ಹೌದು. ಸರ್ಕಾರಕ್ಕೂ ಅವುಗಳಿಗೂ ಸಂಬಂಧವಿಲ್ಲ. ಅವು ಸರ್ಕಾರದ ಕಾರ್ಯಕ್ರಮಗಳೂ ಅಲ್ಲ. ಸಮಾಜದ ಸ್ವಾಸ್ಥ್ಯಕ್ಕಾಗಿ ಸಮಾಜವೇ ನಡೆಸುವಂಥ ಕಾರ್ಯಕ್ರಮಗಳು. ಆದ್ದರಿಂದ ಟ್ರಸ್ಟ್ ಖಾದಿ ಕೆಲಸ ಪ್ರಾರಂಭಿಸಿದಾಗಿನಿಂದಲೂ ಅದನ್ನು ಜನತೆಯ ಸಹಕಾರದಿಂದಲೇ ನಡೆಸಿಕೊಂಡು ಬಂದಿದೆ. ಇತ್ತೀಚೆಗೆ ರಿಬೇಟಿನ ಕೃಪಾ ಪೋಷಣೆಯಿಲ್ಲದೆ ಖಾದಿ ವ್ಯಾಪಾರ ಮಾಡುತ್ತಿದೆ. ಕಳೆದ ತಿಂಗಳು ೫೦ ಸಾವಿರ ರೂಪಾಯಿಗಳಷ್ಟು ಖಾದಿ ಮಾರಾಟವಾಗಿದೆ ಮತ್ತು ೮೦೦ ಮೀಟರ್‌ನಷ್ಟು ಖಾದಿ ಉತ್ಪಾದನೆಯಾಗಿದೆ. ಕಳೆದ ತಿಂಗಳು ನೇಕಾರರ ಸರಾಸರಿ ಆದಾಯ ಸುಮಾರು ೬,೦೦೦ದಷ್ಟು ಇತ್ತು. ಈ ಉದ್ಯಮದಲ್ಲಿ ಸುಮಾರು ೧೨ಜನ ವರ್ಷವಿಡೀ ನಿರಂತರ ಉದ್ಯೋಗ ಪಡೆದಿದ್ದಾರೆ. ಇತ್ತೀಚೆಗೆ ಖಾದಿ ಬಟ್ಟೆಗೆ ಬೇಡಿಕೆ ಗಣನೀಯವಾಗಿ ಬೆಳೆದಿದೆ. ಬೇಡಿಕೆಗೆ ಅನುಗುಣವಾಗಿ ಉತ್ಪಾದನೆಯಾಗುತ್ತಿಲ್ಲ. ಮುಖ್ಯ ಕಾರಣ ಪರಂಪರಾಗತ ನೇಕಾರಿಕೆ ಹೊಸ ತಲೆಮಾರಿನ ಯುವಕರನ್ನು ಆಕರ್ಷಿಸುತ್ತಿಲ್ಲ. ಹಳೆ ತಲೆಮಾರಿನವರು ನಿವೃತ್ತರಾಗುತ್ತಿದ್ದಾರೆ. ಜೀವನದ ಅವಿಭಾಜ್ಯ ಅಂಗವಾದ ಹಾಗೂ ಕಲಾ ಪ್ರಪಂಚದ ಭಾಗವಾದ ನೇಕಾರಿಕೆಗೆ ಯುವ ಪೀಳಿಗೆ ಬಂದಲ್ಲಿ ಈ ಸಮಸ್ಯೆ ಬಗೆಹರಿಯುವುದು.

# ಸರ್ವೋದಯ ಆಂದೋಲನದ ಮುನ್ನಡೆ

೧೯೪೮ ರಿಂದ ಇದುವರೆಗೆ ಶ್ರೀರಂಗಪಟ್ಟಣದ ಬಳಿಯಿರುವ ಪಶ್ಚಿಮವಾಹಿನಿ ಕ್ಷೇತ್ರದಲ್ಲಿ ಸರ್ವೋದಯ ಮೇಳ ನಡೆಯುತ್ತಾ ಬಂದಿದೆ. ಅಲ್ಲಿ ಗಾಂಧೀಜಿಯವರ ಚಿತಾಭಸ್ಮವನ್ನು ವಿಸರ್ಜನೆ ಮಾಡಲಾಗಿದೆ. ಗಾಂಧೀಜಿ ಜಗತ್ತಿಗೆ ಅಪ್ರತಿಮ ಸಿದ್ಧಾಂತವೊಂದನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ. ಆ ಸಿದ್ಧಾಂತ ಇದುವರೆಗಿನ ಎಲ್ಲ ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಸಿದ್ಧಾಂತಗಳನ್ನು ಮೀರಿದ ಸಿದ್ಧಾಂತವಾಗಿದೆ. ಅದುವೆ ಸರ್ವೋದಯ ಸಿದ್ಧಾಂತ. ಆ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಮತ್ತು ಅದಕ್ಕಾಗಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಪ್ರತಿವರ್ಷ ಅಲ್ಲಿ ಫೆಬ್ರವರಿ ೧೦,೧೧, ಮತ್ತು ೧೨ರಂದು ಸೇರುತ್ತಾರೆ ಮತ್ತು ತತ್ಸಂಬಂಧಿತ ವಿಷಯಗಳ ಬಗ್ಗೆ ಚರ್ಚೆ ಮತ್ತು ಚಿಂತನಾ ಮಾಡುತ್ತಾರೆ. ಈ ಸಲದ ಮೇಳದಲ್ಲಿ ಭೂಮಿ ಮತ್ತು ಪರಿಸರ ವಿಷಯವಾಗಿ ಶ್ರೀ ಪಾಂಡುರಂಗ ಹೆಗ್ಗಡೆಯವರು ಮಾತನಾಡಿದರು. ನಂತರ ನಡೆದ ಗೋಷ್ಠಿಯಲ್ಲಿ ಅನೇಕರು ಭಾಗವಹಿಸಿದರು. ಹಿಂದ್ ಸ್ವರಾಜ್ ಗ್ರಂಥದ ಬಗ್ಗೆ ಡಾ?ಸಿ.ಪಿ.ನಾಗರಾಜ್ ಮಾತನಾಡಿದರು. ಈ ಗೋಷ್ಠಿಯೂ ಬಿಸಿ ಚರ್ಚೆಗೆ ವೇದಿಕೆ ಒದಗಿಸಿತು.

ಬರುವ ವರ್ಷದಿಂದ ಸರ್ವೋದಯ ಮೇಳವನ್ನು "ಗಾಂಧೀ ಜಾತ್ರೆಯ" ಸ್ವರೂಪ ಪಡೆಯುವಂತೆ ಮಾಡಬೇಕೆಂದು ತೀರ್ಮಾನಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳು, ವೈಚಾರಿಕ ಗೋಷ್ಠಿಗಳೂ ಮತ್ತು ಕೃಷಿ ಕ್ಷೇತ್ರಗಳಲ್ಲಿಯ ಬೆಳವಣಿಗೆಗಳು ಮುಂತಾದ ವಿಷಯಗಳು ಜಾತ್ರೆಯಲ್ಲಿ ಒಳಗೊಳ್ಳುವಂತೆ ಮಾಡಬೇಕೆಂದು ಯೋಚಿಸಲಾಗಿದೆ. ತನ್ಮೂಲಕ ಹೆಚ್ಚು ಜನ ಮೇಳದಲ್ಲಿ ಭಾಗವಹಿಸಬೇಕೆಂದು ಉದ್ದೇಶ. ಲೋಕನಾಯಕ ಜಯಪ್ರಕಾಶ್ ನಾರಾಯಣರು ಪ್ರಾರಂಭಿಸಿದ್ದ ಸಂಪೂರ್ಣ ಕ್ರಾಂತಿಯ ಹೆಸರಿನಲ್ಲಿ ಸಂಘಟನೆಯೊಂದು ಇದೆ. ಅದರ ಹೆಸರು ಸಂಪೂರ್ಣ ಕ್ರಾಂತಿ ಮಂಚ್. ಆ ಸಂಘಟನೆಯ ಕಾರ್ಯಸಮಿತಿಯ ಸಭೆ ಇತ್ತೀಚೆಗೆ ಬಿಹಾರ ರಾಜ್ಯದ ಮುಂಗೇರ ಜಿಲ್ಲೆಯಲ್ಲಿ ನಡೆಯಿತು. ಮುಂದಿನ ವರ್ಷದ ವೇದಿಕೆಯ ಸಮ್ಮೇಳನ ಬರುವ ಮಾರ್ಚ್ ೧೮ ಮತ್ತು ೧೯ರಂದು ಮುಂಗೇರ್ ಜಿಲ್ಲೆಯ ದರಿಯಾಗಂಜ್ ಎಂಬಲ್ಲಿ ನಡೆಸಲು ತೀರ್ಮಾನಿಸಲಾಯಿತು. ವಿವಿಧ ರಾಜ್ಯಗಳಲ್ಲಿ ವೇದಿಕೆಯ ಸಂಘಟನೆಗಾಗಿ ಮತ್ತು ಸಂಪೂರ್ಣ ಕ್ರಾಂತಿ ಆಂದೋಲನದ ಹಳೆಯ ಸಂಗಾತಿಗಳನ್ನು ಸಕ್ರಿಯಗೊಳಿಸಲು ವಿವಿಧ ರಾಜ್ಯಗಳಿಗೆ ಭೇಟಿ ಕೊಡಲು ವಿವಿಧ ಕಾರ್ಯಕರ್ತರಿಗೆ ಜವಾಬ್ದಾರಿ ಕೊಡಲಾಯಿತು. ಉತ್ತರ ಪ್ರದೇಶದ ಬರೇಲಿ ಜಿಲ್ಲಾ ಸರ್ವೋದಯ ಮಂಡಲವು ನಿಶುಲ್ಕ ಚಿಕಿತ್ಸಾ ಸರ್ವೋದಯ ಶಿಬಿರವನ್ನು ಪ್ರಾಯೋಜಿಸಿತು. ವೈದ್ಯ ದೇಶದೀಪ ಶರ್ಮಾರವರು ರೋಗಿಗಳಿಗೆ ಸೇವಾಭಾವದಿಂದ ಆಯುರ್ವೇದಿಕ ಚಿಕಿತ್ಸೆಮಾಡಿದರು. ಅವರಿಗೆ ಆರೋಗ್ಯದಿಂದಿರುವ ಬಗ್ಗೆ ಸರಳ ನಿಯಮ ತಿಳಿಸಿದರು. ೬೦ ರೋಗಿಗಳು ನಿಶುಲ್ಕ ಚಿಕಿತ್ಸೆಯ ಲಾಭ ಪಡೆದರು. ಶಿಬಿರದಲ್ಲಿ ಸಕ್ಕರೆ ಖಾಯಿಲೆ, ರಕ್ತದೊತ್ತಡ, ಅಜೀರ್ಣತೆ, ಹೃದಯರೋಗ ಮುಂತಾದ ರೋಗಿಗಳಿಗೆ ಚಿಕಿತ್ಸೆ ಕೊಡಲಾಯಿತು.

# ಪ್ರತಿಧ್ವನಿ

## ಪಟ್ಟುಬಿಡದ ಅಮೇರಿಕ ಪಾಶ

೨೬ ಜನವರಿ ೨೦೧೫ರ ಗಣತಂತ್ರ ದಿನೋತ್ಸವದಂದು ದಿಲ್ಲಿಯಲ್ಲಿ "ಸಾರ್ವಭೌಮ" ಒಬಾಮಾ"ಜಗ"ಗಣಮನ ಅಧಿನಾಯಕನಾಗಿ, "ಭೂರಥ" ಭಾಗ್ಯವಿಧಾತನಾಗಿ ರಾರಾಜಿಸಿದ. ಇಡೀ ದಿಲ್ಲಿಯೇ ಆತನ ಜೀವರಕ್ಷಣೆಗಾಗಿ ಒಂದು ಕೆಂಪುಕೋಟೆಯಾಗಿ ಮೇಲೆದ್ದಿತ್ತು. ದಿಲ್ಲಿಯಧರೆಯನ್ನೇ ಕೆಂಪುಗಂಬಳಿಯನ್ನಾಗಿಸಿ, "ಬರಾಕ್" ಒಬಾಮಾನಿಗೆ ಭೋ ಪರಾಕ್ ಸಲ್ಲಿಸುತ್ತಾ, "ಬರಾಕ್!ಬರಾಕ್!" ಎಂದು ವಿಮಾನ ಬರುವ ಆಗಸದೆಡೆಗೆ "ಬಾರ್ಕ್" ಮಾಡುತ್ತಾ, ಆತನ ಪಾದಸ್ಪರ್ಶಕ್ಕಾಗಿ ನಮ್ಮ ಗಣಪತಿಗಳು ಕಾತರದಿಂದ ಕಾಲ್ತುದಿಯಲ್ಲಿ ಕಾದು ನಿಂತಿದ್ದರು. "ಅತಿಥಿದೇವೋಭವ!"ಎನ್ನುವ ಈ ದೇಶದಲ್ಲಿ ಆ ದೇವನು ಅತಿಥಿಯಾಗಿ ತಾನೇಭ'ವಿಸಿದ್ದರೂ, ಇಂಥ ಆದರಾತಿಥ್ಯವನ್ನು ಕಾಣುತ್ತಿರಲಿಲ್ಲವೆಂಬುದು ದಿಟ. ಈ ಗಣರಾಜ್ಯೋತ್ಸವಕ್ಕಾಗಿ ಎರಚಾಡಿದ ಕೋಟ್ಯಂತರ ತೆರಿಗೆ ರೂಪಾಯಿಗಳನ್ನು ಕಂಡಾಗ(ಹೆಸರುಪಟ್ಟೆಗಳ ದಶಲಕ್ಷರೂ"ಪ್ರಧಾನಿಸೂಟ್" ಹೊರತುಪಡಿಸಿ), ಒಂದು ಸಂಗತಿಯಂತೂ ಗಣನೀಯವಾಗುತ್ತದೆ: ಭಾರತವನ್ನು ಪಾಶ್ಚಾತ್ಯರು ತೊರೆದು ೬೭ ವರ್ಷಗಳು ಉರುಳಿದರೂ, ಭಾರತ ಮಾತ್ರ ತಾನು"ಪಶ್ಚಿಮಾಭಿಮುಖ ನಮಾಜ಼್" ಮಾಡುವುದನ್ನು ತೊರೆಯಲಾಗೇ ಇಲ್ಲಎಂಬುದು. ಅಂದು ಶ್ವೇತವರ್ಣೀಯರತ್ತ ಇದ್ದ ಗೀಳು ಇಂದು ಅರುವತ್ತೇಳು ಪಟ್ಟು ಹೆಚ್ಚಿ, ಶ್ವೇತಭವನೇಶ್ವರನಲ್ಲಿ ನೆಟ್ಟುಕೊಂಡಿದೆ, ಅಷ್ಟೇ. ಇಂದಿಗೂ, ಅಮೇರಿಕಾ ಒಂದು ಅಮರಲೋಕವೇ ಎನಿಸಿ, ಅದರ ಅಧ್ಯಕ್ಷನೊಬ್ಬ ಯಕ್ಷನೇ ಎಂಬುದು ವ್ಯಾಪಕವಾದ ಭಾವನೆಯಾಗಿದೆ. ಆತನ ಯಕ್ಷಿಣಿ ಎಂತಿದೆಯೆಂದರೆ, ಆತ ಉಗ್ರಮಾನ್ಯ ಪಾತಕಿಸ್ಥಾನದ ತುಪಾಕಿಸ್ಥಾನಗಳೊಳಗೆ ಡಾಲರ್‌ಗಳ ಹೊನಲನ್ನೇ ಹರಿಸುತ್ತಿದ್ದರೂ, ನಮ್ಮನ್ನದು ಮುಟ್ಟುತ್ತಲೇ ಇಲ್ಲ. ಒಸಾಮಾಗಳ ಹಿಂದಿರುವ ಒಬಾಮಾಗಳ ಕೈವಾಡ, ಭಸ್ಮಾಸುರರ ಹಿಂದಿರುವ ಬುಶ್ ("ಭುಸ್")ಮಹಾಶಯರ ಮುಖವಾಡ ನಮಗೆ ಗೋಚರಿಸುತ್ತಲೇ ಇಲ್ಲ. ಸ್ವಾತಂತ್ರ್ಯ-ಸಮಾನತ್ವ-ಸಹೋದರತ್ವಗಳ ತುತ್ತೂರಿಯೂದುತ್ತಾ, ಬಾಂಬ್ ಬಿದ್ದಾಗ ಬುವಿಯೇ ಬೆಚ್ಚುವಂತೆ ಬೊಬ್ಬಿಡುವ ಈ "ಅತಿಸಭ್ಯ" ದೇಶೇಶರು, ಕೇವಲ ತಮ್ಮ ದಾಹಗಳಿಗಾಗಿ ಹೇಗೆ ಅರಬ್ ಭೂಗೋಳವನ್ನು-ಜನಾಂಗಗಳನ್ನು ಹೋಳುಮಾಡಿ, ಹೋಳಿಗೆ ತಿಂದಿದ್ದಾರೆ; ಉಗ್ರವಾದದ ಉಗ್ರವ್ಯಾಧಿಯನ್ನು ಉಬ್ಬಿಸಿದ್ದಾರೆ ಎಂಬುದು ನಮ್ಮ"ಪಶ್ಚಿಮಾಂಧ"ನೋಟದೊಳಗೆ ಸುಳಿದೇ ಇಲ್ಲ. ಅಧ್ಯಕ್ಷರ ಮಟ್ಟದಲ್ಲಿರಲಿ, ಅಮೇರಿಕಾತ್ಮಜ ಎನ್ನಾರೈಗಳಿಗೂ ನಮ್ಮ ನೇತಾರರು, "ಎನ್ನಾರೈ-ಚೆನ್ನಾರೈ, ಎನ್ನ ಮುದ್ದುಚೆನ್ನಾರೈ, ನೀನಿಲ್ಲದೆ ಎನಗೆ ಇನ್ನಾರೈ?"ಎಂದು ಅದೇ ಅತಿರೇಕದ ಆರೈಕೆ ನೀಡುತ್ತಿದ್ದಾರೆಯೇ ಹೊರತು, ಸ್ವಿಸ್ ಬ್ಯಾಂಕ್‌ಗಳಲ್ಲಡಗಿರುವ ಧನನಿಧಿಗಿಂತಲೂ ಅತಿ ಅಮೂಲ್ಯವಾದ ನಮ್ಮ ದೇಶದ ಬುದ್ಧಿ ನಿಧಿಯು ಅಮೇರಿಕಾದಲ್ಲಿ ನಿಕ್ಷಿಪ್ತವಾಗುತ್ತಿರುವುದರ – ಮತ್ತು ಅದರಿಂದ ನವಭಾರತ ನಿರ್ಮಾಣಕ್ಕೆ ಎಣಿಕೆಗೆಟುಕದಷ್ಟು ಹಾನಿಯಾಗುತ್ತಿರುವುದರ –ಕಾವು ಅವರನ್ನಿನ್ನೂ ತಟ್ಟಿಯೇ ಇಲ್ಲ.

ಎಸ್.ಜಿ. ಸೀತಾರಾಮ್

ಮೈಸೂರು
೧೩/೦೨/೨೦೧೫

# ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

| | | |
|---|---|---|
| ಶ್ರೀ.ಟಿ.ಜಿ.ವಿಠಲ್ | – | ಬಳ್ಳಾರಿ |
| ಶ್ರೀಮತಿ. ಕೆ.ಟಿ.ಭ್ರಮರಾಂಭ | – | ಹಾಸನ |
| ಶ್ರೀ.ಕೆ.ಮೋಹನ್ ದೇವ ಆಳ್ವ | – | ಬೆಂಗಳೂರು |
| ಶ್ರೀ.ಹೆಚ್.ಮಂಜುನಾಥ ಭಟ್ | – | ಬೆಂಗಳೂರು |
| ಶ್ರೀ.ಟಿ.ರಂಗಶೆಟ್ಟಿ | – | ಹೊಳೆನರಸೀಪುರ |
| ಪ್ರೋ ಹೆಚ್.ಎಲ್.ಕೇಶವಮೂರ್ತಿ | – | ಮಂಡ್ಯ |

**ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಾಕ್ಕಾಗಿ ಹಾಗೂ ~~ಇವರು~~ ಹೊಸದಾಗಿ ಪತ್ರಿಕೆ ಚಂದದಾರರಾದ**

**ಶ್ರೀ ಕೆ.ರಾಘುವೇಂದ್ರರಾವ್, ಶ್ರೀ ಕೋಟಿಗಾನಹಳ್ಳಿ ರಾಮಯ್ಯ, ಶ್ರೀಮತಿ ಹೆಚ್.ರಾಜೇಶ್ವರಿ, ಶ್ರೀಮತಿ ನಾಗಮಣಿ, ಶ್ರೀಮತಿ ತಾರಾ ಕಿರಣ್, ಶ್ರೀ ಎಸ್,ದರ್ಶನ್, ಶ್ರೀ ಸುಂದರ ಮೂರ್ತಿ, ಶ್ರೀ ಶಿವಕುಮಾರ ದರ ಶೆಟ್ಟಿ, ಶ್ರೀ ಶೇಷಾದ್ರಿ ಎ., ಶ್ರೀ ಸುರೇಶ್ ಕುಮಾರ್ ಶರ್ಮಾ, ಶ್ರೀ ಎನ್.ಶಿವಕುಮಾರ್, ಶ್ರೀ ವಿರೂಪಾಕ್ಷ ತುಪ್ಪಟ್, ಶ್ರೀ ಶ್ರೀನಿವಾಸ ಹುಚ್ಚಯ್ಯ, ಶ್ರೀ ಬಿ.ಬಿ ಸತೀಶ್ - ಬೆಂಗಳೂರು.**

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

---

**"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.**

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ-ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

---

**ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ**

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..........................................................................................

..............................................................................................

..............................................................................................

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at Sanketh Mudrna, Melkote